ಕೊರವಂಜಿ

A. ANANTAIAH.

ಸಂಪುಟ ೧೦ | ಅಕ್ಟೋಬರ್ ೧೯೫೦ | ಸಂಚಿಕೆ ೭

ಕುಹಕಿಡಿಗಳು

ಸರ್. ಎಂ. ವಿ. ಅವರಿಗೆ ದೃಷ್ಟಿ ತಾಕದಿರಲಿ ಎಂದು ಕೊರವಂಜಿ ನೆಟ್ಟಿಗೆ ಮುರಿದು ದೃಷ್ಟಿ ಪರಿಹಾರ ಮಾಡಿದಳು.

* * *

ಸ್ಪೈಯಿನಿನಲ್ಲಿ ಸಾಲಜಾರ್ ! (ಸುದ್ದಿ)
ಓಹೋ ! ಗೋವಾನ ಸ್ಪೈಯಿನಿಗೆ ಮಾರುತ್ತಾರೋ !

* * *

ನಿವೃತ್ತ ಕಾಂಗ್ರೆಸ್ ಅಧ್ಯಕ್ಷರಿಗೆ ಪ್ರಾಂತ್ಯಗಳ ಗೌವರ್ನರ್ ಪದವಿಕೊಟ್ಟು ದೇಶದ ಮೂಲೆಗಳಲ್ಲಿ ಕೂರಿಸಬೇಕೆಂದಿರುವರು ಎಂಬುದು ನಿಜವಲ್ಲವಂತೆ.

* * *

ಮಧ್ಯ ಪ್ರದೇಶದಲ್ಲಿ ತೋಳಗಳು ಹಳ್ಳಿಗಳಿಗೆ ನುಗ್ಗಿವೆಯಂತೆ.
— ನಮ್ಮೂರಿನಲ್ಲಿ ತೋಳಗಳು ಪಟ್ಟಣದಲ್ಲೇ ಸೇರಿಕೊಂಡಿವೆ

* * *

ವಿಮಾನ ಕಾರ್ಖಾನೆ ಕೆಲಸಗಾರರೆಲ್ಲಾ ಸಂಪು ಹೂಡಿದ್ದಕ್ಕೂ ಜಾಲಹಳ್ಳಿಯ ಮಿಷಿನ್ ಟೂಲ್ ಕಾರ್ಖಾನೆಯಲ್ಲಿ ೬೦೦೦ ಕೆಲಸಗಾರರು ಬೇಕೆಂಬುದಕ್ಕೂ ಏನೇನೂ ಸಂಬಂಧವಿಲ್ಲವಂತೆ.

ಲಕ್ನೋದಲ್ಲಿ ದೊಡ್ಡ ಕತ್ತಿಕಿರುಬ ಜವಾನನ ಮೇಲೆ ಬಿತ್ತಂತೆ. ಆದರೆ ಫಿರೋಜ್ ಗಾಂಧಿ ದೀಪ ಹಚ್ಚಿದ್ದುಕಂಡು ಅಹಿಂಸೆ ಅಹಿಂಸೆ ಎಂದಂದು ಯಾರಿಗೂ ಹಿಂಸೆ ಮಾಡದೇ ಹೊರಟುಹೋಯಿತಂತೆ.

* * *

ಶ್ರೀ ಟಾಂಡನ್‌ರವರು ಅಧ್ಯಕ್ಷರಾದರೆ, ಸಂಸ್ಥೆಯನ್ನೇ ಅಳ್ಳಾಡಿಸಿ ಬಿಡುತ್ತಾರೆ ಎಂಬ ಗಾಳೀ ವರ್ತಮಾನ ಕೇಳಿದ್ದಕ್ಕೇನೇ ಶ್ರೀ ರಾಜಾಜಿಯವರು, ಟಾಂಡನರ ಬಿಡಾರದಲ್ಲೇ ಇಳಿದುಕೊಂಡರು ಎಂಬುವುದು ಶುದ್ಧ ಕುಹಕ!

* * *

ಕೊರಿಯಾ ಯುದ್ಧದ ವಿಷಯವಾಗಿ ಅಮೆರಿಕನ್ನರು ರಷ್ಯನ್ನರು, ಭಾರತೀಯರೂ ಕೂಡ ಆಸಕ್ತಿವಹಿಸಿದ್ದರಂತೆ.

—ಕೊರಿಯನ್ನರನ್ನು ಕೇಳಬೇಕಾಗಿಲ್ಲ! ಅಲ್ಲವೇ?

* * *

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ರಚನೆಯು ಬಹಳ ಕಷ್ಟವಾದುದು (ಸುದ್ದಿ)

—ಏಕೆ ಅದೂ ಮಂತ್ರಿಮಂಡಲದಂತೆಯೇನೇ ?

* * *

" ಬ್ಲಡ್ ಬ್ಯಾಂಕಿಗೆ ರಕ್ತವನ್ನು ಕೊಟ್ಟು ಜೀವಸಂರಕ್ಷಣೆ ಮಾಡಿ " ಎಂದು ಸಾಹುಕಾರರನ್ನು ಕೇಳಿದಾಗ ಆತ " ಮೊದಲೇ ಬಂದಿದ್ದರೆ ಕೊಡುತ್ತಿದ್ದೆ. ವರಮಾನ ತೆರಿಗೆ ಇಲಾಖೆಯವರು ಬಂದು ನನ್ನ ರಕ್ತವನ್ನೆಲ್ಲಾ ಆಗಲೇ ಹೀರಿಕೊಂಡು ಹೋದರಲ್ಲಾ ! " ಎಂದ ಪಶ್ಚಾತ್ತಾಪ ಪಟ್ಟನಂತೆ.

* * *

ಆಗಿನ ಕಾಲಕ್ಕೂ, ಈ ಸ್ವಾತಂತ್ರ್ಯದ ಕಾಲಕ್ಕೂ ಒಂದು ವ್ಯತ್ಯಾಸ.

ಆಗ ಸರ್ಕಾರ ನನಗೆ ಅನ್ನಬಟ್ಟೆ ಕೊಡಬೇಕು ಎಂದಿತ್ತು.

ಈಗ ನಾನೇ ಸರ್ಕಾರಕ್ಕೆ ಅನ್ನಬಟ್ಟೆ ಒದಗಿಸಬೇಕು ಎಂದಿದೆ.

—ಎಂದು ಕುಹಕಿಯೊಬ್ಬರು ಬರೆದಿದ್ದಾರೆ.

* * *

ಕುರಿಗಳ ರಾಜ್ಯದಲ್ಲಿ, ಪ್ರಜಾಪ್ರಭುತ್ವ ಬಂದರೆ ಕಾಲಕ್ರಮೇಣ ಕೆಲವು ಕುರಿಗಳು ತೋಳಗಳಾಗುವುವು.

—ಎಂದು ಬರ್ಟ್ರೆಂಡ್ ಡಿ ಜ್ಯೂವೆನಲ್ ಹಿಂದೆಂದೋ ಹೇಳಿದ್ದಾನೆ.

ಉರಿಗಾಳು

ಗೌಹತಿಯಲ್ಲಿ ಸಿಡಿಲು ಬಡಿದ ಒಬ್ಬರು ಉಪಾಧ್ಯಾಯರ ಮರಣ (ವರದಿ) ಅವುಳಿ ಜವುಳಿ ಜನನದ ಸುದ್ದಿ ಬಂತೋ ಏನೊ, ಪಾಪ?

* * *

ರೇಡಿಯೋ ಭಾಷಣಗಳನ್ನು ಕೇಳುವವರೇ ವಿರಳ; ಶೇಕಡ ೩ ಜನ ಕೇಳು ತ್ತಿದಾರೆ, ಅಷ್ಟೆ; ಅವರ ಪೈಕಿ ಇಬ್ಬರಿಗೆ ಮಾತ್ರ ಅವು ಅರ್ಥವಾಗುತ್ತಿದೆ (ಬ್ರಿಟಿಷ್ ಸಂಶೋಧಕ) ಇಲ್ಲಿ, ಒಬ್ಬನೇ ಒಬ್ಬ ಅದನ್ನು ಕೇಳುವವ; ಅವನೇ ಹೇಳುವವ. ಅವನಿಗೂ ಅನೇಕವೇಳೆ ಅದರ ಅರ್ಥ ತಿಳಿಯದು.

* * *

ಇಂಗ್ಲಂಡ್—ಆಸ್ಟ್ರೇಲಿಯಾ ಟೆಸ್ಟ್ ಪಂದ್ಯಗಳನ್ನು ಬ್ರಾಡ್‌ಕಾಸ್ಟ್ ಮಾಡುವುದಿಲ್ಲವೆಂಬ ಸುದ್ದಿಯಿಂದ ಸಂಸ್ಥಾನದ ಶಾಲಾ ಬಾಲಕರು ಕೆರಳಿರುವ ರೆಂಬ ಸಮಾಚಾರವನ್ನು ಆಸ್ಟ್ರೇಲಿಯಾ ಸರ್ಕಾರಕ್ಕೆ ವಿದ್ಯಾಭಿಮಾನಿಗಳು ತಿಳಿ ಸಿರುವರಂತೆ.

* * *

ಕುದುರೆ ಜೂಜುಗಳನ್ನು ನಡೆಯಿಸುತ್ತಿದ್ದರೆ, ಕಮ್ಯೂನಿಸಂ ತತ್ವ ಪ್ರಚಾರ ವನ್ನು ತಡೆಕಟ್ಟಿದಂತೆಯೆ (ಮೈಸೂರು ಮಂತ್ರಿ)....ಕುದುರೆಗಳಲ್ಲಿ.

* * *

ಸಿನಿಮ ಮಂದಿರಗಳಲ್ಲಿ ಸಿಗರೇಟು ಸೇದಬಾರದು (ಸರ್ಕಾರಿ ಆಜ್ಞೆ) ಇನ್ನು ಆ ಸಪ್ಪೆ ಚಿತ್ರಗಳನ್ನು ಹೇಗೆ ಬೇಜಾರಿಲ್ಲದೆ ನೋಡುತ್ತಾ ಕುಳಿತಿರುವುದು, ಎಂದು ಅನೇಕರು ಕೇಳುತ್ತಿದಾರೆ.

* * *

ತಮ್ಮ ಹಿಂದಿನ ಹೇಳಿಕೆಯನ್ನು ವಿಶದೀಕರಿಸಿ ನಾನು ಈಚೆಗೆ ಇತ್ತ ಹೇಳಿಕೆಯನ್ನು ಟೀಕಿಸಿ ಶ್ರೀಯುತರು ಕೊಟ್ಟ ಹೇಳಿಕೆಯನ್ನು ಪುಷ್ಟೀಕರಿಸಿ ಜನಾಬರು ಪ್ರಕಟಿಸಿದ ಹೇಳಿಕೆಯನ್ನು ಖಂಡಿಸಿ ಇಷ್ಟರಲ್ಲೇ ಒಂದು ಹೇಳಿಕೆ ಯನ್ನು ಹೊರಡಿಸುವುದಾಗಿ ಇಂದು ಒಂದು ಹೇಳಿಕೆ ಹೊರಬಿದ್ದಿದೆ.

* * *

ಸ್ವತಂತ್ರ ಭಾರತದ ಉತ್ಕಟ ಪರಿಸ್ಥಿತಿಯಲ್ಲಿ ನಾವು ಕಲಿಯಬೇಕಾದ ಮತ್ತೊಂದಂಶವಿದೆ; ಗುಪ್ತ ಸಮಾಚಾರಗಳನ್ನು ಶತ್ರುಗಳ ಕಿವಿಯಿಂದ ಗೋಪ್ಯ ವಾಗಿಟ್ಟಿರ ಬೇಕಾದ ಅಗತ್ಯ (ಭಾಷಣ) ಕರೀ ಪೇಟಿಯ ವಿಳಾಸವನ್ನು ನಾವು ಪ್ರತಿ ಒಬ್ಬರೂ ಗೋಪ್ಯವಾಗಿಟ್ಟಿಲ್ಲವೆ? ಇದಕ್ಕಿಂತ ನಮ್ಮ ಪ್ರಾಮಾಣಿಕತೆಗೆ ಬೇರೆ ಉದಾಹರಣೆ ಬೇಕೆ ?

* * *

" ನಾವು ಎರಡು ವರ್ಷಕ್ಕೆ ಸಾಕಾಗುವಷ್ಟು ಧಾನ್ಯವನ್ನು ಸಂಗ್ರಹಿಸಿಡಲು ಪ್ರಯತ್ನಿಸಬೇಕು " (ಸರ್. ಎಂ. ವಿ.) ಅನೇಕರು ಆಗಲೇ ಈ ನೀತಿಯನ್ನನು ಸರಿಸಿರುವರಂತೆ.

* * *

ಪ್ರತಿ ಒಂದು ಸಂಸಾರದಲ್ಲೂ ಮೂರು ಅಥವ ಎರಡು ಮಕ್ಕಳಿಗಿಂತ ಹೆಚ್ಚಾಗಿ ಜನಿಸಬಾರದೆಂಬ ಚಳುವಳಿಯನ್ನು ನಾವು ಸಂಸ್ಥಾನದಲ್ಲಿ ಹೊರ ಬೇಕಾಗಿದೆ (ಭಾಷಣ) ಸರಿ ! ಅಶ್ವತ್ಥ ವೃಕ್ಷಗಳನ್ನು ಕಡಿಯುವುದೊಂದು ಇದಕ್ಕೆ ದಾರಿ.

* * *

ಬೇಗ ಕೊಳೆಯತಕ್ಕವುಗಳ ಮೇಲೆ ಕಂದಾಯ ಹಾಕಬಾರದೆಂಬ ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು (ವರದಿ) ರಾಜಕೀಯ ಪಕ್ಷಗಳಿಗೂ ಇದು ಅನ್ವಯಿಸುವುದೇ ?

* * *

೨,೦೦೦ ಡೆಲಿಗೇಟುಗಳು ನಾನಾ ಪ್ರಾಂತಗಳಿಂದ ಕಾಂಗ್ರೆಸ್ಸಿನ ಮಹಾಧಿ ವೇಶನಕ್ಕೆ ಚುನಾಯಿತರಾಗಿ ಪ್ರಯಾಣ ಬೆಳಸಿದ್ದರೂ ಬಹು ಮುಖ್ಯವಾದ ಕಂಟ್ರೋಲ್ ವಿಚಾರವಾಗಿ ವೋಟ್ ತೆಗೆದಾಗ ಸಭೆಯಲ್ಲಿದ್ದವರು ಕೇವಲ ೩೦೦ ಮಂದಿ ಮಾತ್ರ (ವರದಿ) ಕಂಟ್ರೋಲ್ ಎಂಬ ಶಬ್ದದ ಪ್ರಭಾವವೇ ಹೀಗೆ.

* * *

ಮಹಾತ್ಮ ಗಾಂಧಿಯವರ ಹೆಸರನ್ನು ಪದೇ ಪದೇ ಎತ್ತಿ ಆಡುವುದನ್ನು ನಾವು ಬಿಟ್ಟು ಬಿಡಬೇಕು (ನೆಹರು) ಹೌದು. ಅವರ ಆತ್ಮಕ್ಕೆ ಶಾಂತಿ ದೊರೆಯಲಿ.

* * *

ಇತ್ತೀಚೆಗೆ ಲಾರಿ ಬಸ್ ಅನಾಹುತಗಳು ಹೆಚ್ಚುತ್ತಿರುವುದರಿಂದ, ಡ್ರೈವರು ಗಳು ತಮ್ಮ ಸಂಬಳವನ್ನು ಮುಂಗಡವಾಗಿಯೇ ಕೊಡಬೇಕೆಂದು ಮಾಲೀಕ ರನ್ನು ಒತ್ತಾಯ ಪಡಿಸುತ್ತಿರುವರಂತೆ.

ಕೊರವನ ಸಿಂಹಾವಲೋಕನ

"ಯಾಕೋ? ವ್ಯೈ ಚೆನ್ನಾಗಿಲ್ಲವೇ?" ಅಂದೆ. ಕೊರವ ಬಂದು ಎದುರು ಕುರ್ಚಿಯಲ್ಲಿ ಬಿದ್ದು ಕುಳಿತಾಗ, ಅವನ ಎಂಟು ದಿವಸದ ಗಡ್ಡ ಮಿಾಸೆ ನೋಡಿದಾಗ.

"ಚೆನ್ನಾಗಿಲ್ಲದೇ ಏನು? ತೋಳ ಇದ್ದಹಾಗೆ ಇದೀನಲ್ಲಾ" ಎಂದು ಗರ್ಜಿಸಿದ.

"ದಿನಕ್ಕೆ ಎರಡುಸಾರಿ ಮುಖಕ್ಷೌರ ಮಾಡುವವನು ನೀನು ಈ ಎಂಟು ದಿವಸದ ಬೆಳೆ ಏತಕ್ಕೆ" ಎಂದೆ.

"ಕಾಲಕ್ಕೆ ತಕ್ಕಂತೆ ತಮ್ಮಾ! ಇದು" ಮಹಾತ್ಮರ ಕಾಲದಲ್ಲಿ ಮುಂಡು ಉಡುತ್ತಿದ್ದೆ. ತಾಂಡನರ ಕಾಲದಲ್ಲಿ ಗಡ್ಡ ಬೆಳಸ್ತೇನೆ" ಎಂದ.

ಈ ಕುಹಕ ಕಂಡು ನನಗೆ ರೇಗಿತು. ಸಂಸ್ಕೃತಿ ಇದ್ದವರು ಹೀಗೆ ಮಾತನಾಡಬಾರದು ಅಂತಲೇ ನನ್ನ ಅಭಿಪ್ರಾಯ ಅದಕ್ಕೇ ಅಂದೆ.

"ನಿಂಗೆ ವಯಸ್ಸು ಬಂದರೂ ಬುದ್ಧಿ ಬರಲಿಲ್ಲ" ಅಂತ.

"ಅವನು ಬುದ್ಧಿ ಬರದಿದ್ದರೂ ಗಡ್ಡ ಬಂತಲ್ಲಾ" ಅಂತ ಉತ್ತರ ಹೇಳುಕ್ಕೆ ಮುಂಚೇನೆ ಹೊರಕ್ಕೆ ಹೊರಟುಹೋದೆ.

*　　　*　　　*

ಕಾಂಗ್ರೇಸಿನಲ್ಲಿ ಒಡಕಿದೆಯೋ? ಎಂದ ಹಠಾತ್ತಾಗಿ ಕೊರವ, ಓದುತ್ತಿದ್ದ ಪತ್ರಿಕೇನ ಮೇಜಿನ ಮೇಲೆ ಕುಕ್ಕುತ್ತಾ.

ಚಕ್ರಬಂಧ ಸ್ಪರ್ಧೇನ ಮುಗಿಸುತ್ತಾಯಿದ್ದ ನನಗೆ ತಂಗು ಬಡಿದಹಾಗಾಯ್ತು. ಬಾಯಿನಿಂದ ಪೆನ್ಸಿಲ್ ತುದಿಯನ್ನು ಹೊರಕ್ಕೆ ತೆಗೆದು.

"ಇಲ್ಲಾ" ಅಂತ ಉತ್ತರ ಕೊಟ್ಟೆ.

"ಛಟ! ಒಡಕಿಲ್ಲ. ಒಡಕನ್ನು ಬೆಸೆಯುಕ್ಕೆ ಅಂತ ಕೃಪಲಾನಿ ಅಗ್ಗಿಷ್ಟಿಕೆ ಹಚ್ಚಿದ್ದಾರೆ!" ಎಂದು ಕರ್ಕಶವಾಗಿ ನಕ್ಕ.

*　　　*　　　*

"ಒಂದು ಕಪ್ಪೆ ಒಂದು ನಾಗರಹಾವನ್ನು ಕೊಂದು ನುಂಗಿತಂತೆ" ಕೇಳಿದೆಯೋನಯ್ಯಾ ಎಂದ ಕೊರವ, ಕನ್ನಡಕವನ್ನು ಹಣೆ ಮೇಲಕ್ಕೆ ಏರಿಸುತ್ತಾ.

"ಏನು ಮಹಾ! ನಳಮಹಾರಾಜನ ಕತೆಯಲ್ಲಿ ಗೂಟ ಸರವನ್ನೇ ಗಲಿಲ್ಲವೇ?" ಎಂದೆ.

"ಅದಲ್ಲಾ ಕಣಯ್ಯಾ! ಹೀಗಾಗಲು ಕಾರಣ ಗೊತ್ತೆ? ಎಂದ.

"ಇಲ್ಲಾ" ಎಂದು ತಲೆ ಆಡಿಸಿದೆ.

"ಇದೆಲ್ಲಾ ಜನತಾರಾಜ್ಯದ ಪ್ರಭಾವ! ವಟ ವಟ ಎಂದು ಹೊಡೆದು ಕೊಳ್ಳೋದುಬಿಟ್ಟು, ಲಟ ಲಟ ಎಂದು ಅಧಿಕಾರಿಗಳನ್ನೇ ಮುರಿಯೋಕಾಲ. ಪ್ರಾಣಿಗಳಿಗೂ ಹರಡಿದೆ ಈ ಜಾಡ್ಯ!" ಎಂದ ಕೊರವ.

* * *

ಅನಂತನ ಚತುರ್ದಶಿ. ಅಚ್ಚುಕಟ್ಟಾದ ಗಂಧ ಅಕ್ಷತೆ ಇಟ್ಟು ಬಂದಿದ್ದ ಕೊರವ ಕ್ಲಬ್ಬಿಗೆ. ಹಸನ್ಮುಖಿ. ಹೊಟ್ಟೆ ವಿಷಯ ನೋಡಿದರೇ ಕಾಣುತ್ತಿತ್ತು.

"ಊಟ ಬಲುಜೋರೋ" ಎಂದೆ.

"ಹಬ್ಬ ಹರಿದಿನ ಅಂತ ಹಿರಿಯರು ಮಾಡಿದ್ದಕ್ಕೆಲ್ಲಾ ಅರ್ಥವಿದೆ ಮಗೂ; ಆದಿನಗಳಲ್ಲಿ ಕೋಪ ತಾಪ ಕ್ರೌರ್ಯ ಶೌರ್ಯ ಏನೂ ಇರುಲ್ಲ.

"ಅವಿಲ್ಲದಿದ್ದರೆ ನಾರದನ ಹಾಗೇ ನಾವೂನೂ" ಎಂದ ಕೊರವ.

"ಹಾಗಂದರೆ" ಎಂದು ಕಣ್ಣುರೆಪ್ಪೆ ಮಿಟ ಮಿಟ ಗುಟ್ಟಿಸಿದೆ.

"ನಾರದ ಗೊತ್ತಿಲ್ಲವೇ? ಬ್ರಹ್ಮಪುತ್ರ. ಎರಡು ದಿವಸ ರೇಗಿ ಹುಚ್ಚು ಹೊಳೆಹರಿಯೋದು. ಎರಡು ದಿವಸ ನದಿಯೇ ಇಲ್ಲ. ಆಜೂಬಾಜೂ ಇದ್ದವರು ಫನಾ! ಬ್ರಹ್ಮಪುತ್ರ ಹಬ್ಬ ಮಾಡಿದ್ದರೆ ಹೀಗೆ ರಭಸಕ್ಕೆ ಅವಕಾಶ ವಿರುತ್ತಿತ್ತೆ" ಎಂದ.

"ತುಂಬಿದ ಹೊಟ್ಟೆ. ತಲೆ ಹೇಗೆ ಚುರುಕಾಗಿ ಓಡುತ್ತೆ" ಎಂದುಕೊಂಡು ಮನಸ್ಸಿನಲ್ಲಿಯೇ ಕನಿಕರಪಟ್ಟೆ.

* * *

ಕ್ಲಬ್ಬಿನ ಹೊರಗಡೆ ಯಾರೋ ಭಿಕ್ಷುಕಿ ಮಗುವನ್ನೆತ್ತಿಕೊಂಡು ಬಂದಿದ್ದಳು. ಆ ಮಗು ಕಿರ್ರೋ ಎಂದು ಅರಚುತ್ತಿತ್ತು.

ಹೊರಗೆ ಹೋಗಿ ಒದ್ದು ಕಳಿಸಲೇ ಎಂಬ ರಾಹುಕಾಲದ ಯೋಚನೆ ಮನಸ್ಸಿನಲ್ಲಿ ಹಾದು ಹೋಯ್ತು.

ಕೊರವನಿಗೆ ಅದು ಕಾಣಿಸಿರಬೇಕು. ಮೆಲ್ಲನೆ ಪಲುಕಿದ.

"ರೇಗಬೇಡಾ! ತಮ್ಮಾ! ಅದು "ಅನ್ತಃಪುರಗೀತೆ" ಎಂದ.

——o——

ರಮಾರಮಣ

ಕೀರ್ತನಕಾರನ ಬದುಕು ಬರಬರುತ್ತ ಬಹಳ ಕಷ್ಟವಾಗುತ್ತಿದೆ. ಹರಿಕಥೆಗೆ ಉಪಕಥೆಯೇ ಉಪ್ಪಿನಕಾಯಿ. ಆದರೆ, ನಮ್ಮ ಉಪಕಥೆಗಳನ್ನೆಲ್ಲ ಈಚೆಗೆ ಭಾಷಣಕಾರರೇ ಅಪಹರಿಸಿ ಪ್ರಚಾರಮಾಡಿ ಬಿಟ್ಟಿರುವುದರಿಂದ ನಮಗೆ ಹೊಸ ಉಪಮಾನಗಳನ್ನೂ ಕಥೆಗಳನ್ನೂ ತಯಾರಿಸುವುದು ಕಷ್ಟವಾಗಿದೆ. ಅಲ್ಲದೆ, ಎಲ್ಲಿಗೆ ಹೋಗಿ ನಾವು ದೇವರ ವಿಷಯ ಹೇಳಿದರೂ, ಜನ ಆಗಾಗ ಎದ್ದು, ಅನ್ನ ದೇವರು ಬೇಕು, ಎಂದು ಕೂಗ ಹತ್ತಿದಾರೆ. ಮೈಕ್ ಧ್ವನಿವರ್ಧಕ ಯಂತ್ರ ಇವುಗಳನ್ನು ಹೊತ್ತು ತಿರುಗದ ಕೀರ್ತನ ಕಾರನಿಗೆ ಎಂಥ ಕುಗ್ರಾಮದಲ್ಲೂ ಮನ್ನಣೆ ದೊರೆಯುತ್ತಿಲ್ಲ. ಸಿನಿಮ ಮಟ್ಟುಗಳಲ್ಲೇ ನಾವು ದೇವತಾ ಸ್ತೋತ್ರ ಮಾಡಬೇಕೆಂಬ ಹಠಬೇರೆ. ದಾಸರ ಪದ, ಸುಳಾದಿ, ಕಂದಪದ್ಯ, ಸೀಸಪದ್ಯ, ತ್ಯಾಗರಾಜ ಕೀರ್ತನೆ, ಅಭಾಂಗ್ ಇವ್ಯಾವುದೂ ಜನತೆಗೆ ಬೇಕಿಲ್ಲ. ಹಳ್ಳಿಯವರೂ ಕೈ ಗಡಿಯಾರ ಕಟ್ಟಿ ಕೊಂಡಿರುವ ಕಾಲ ಬಂದು ಹೋಯ್ತು. ಅವರು ಗಳಿಗೆಗೊಂದು ಬಾರಿ ಎಡಗೈಯನ್ನು ಕಿವಿಗಿಟ್ಟುಕೊಂಡು ನಮ್ಮಮೇಲೆ ಕೆಂಚುಕಣ್ಣು ಬೀರಿದರೆ, ನಮ್ಮ ಕೀರ್ತನ ಹೇಗೆ ಮುಂದಕ್ಕೋಡುತ್ತದೆ, ಹೇಳಿ.


ಕೀರ್ತನೆ ಪ್ರಾರಂಭವಾದ ಅರ್ಧಗಂಟೆಯೊಳಗೆ ನಿದ್ದೆಮಾಡುವ ಮಂದಿಯ ಸಂಖ್ಯೆ ಹೆಚ್ಚಿದೆ. ಮೊನ್ನೆ ಒಬ್ಬರು ಪಟೇಲರು ಮಧ್ಯೆ ಎದ್ದು ಹೋದರು. ನಾನು ಶಾನುಭೋಗರನ್ನು ವಿಚಾರಿಸಿದೆ, ಏಕೆ ಸ್ವಾಮಿ, ಅಂತ. ಅದಕ್ಕವರಂದರು ಅವರಿಗೆ ನಿದ್ದೆಯಲ್ಲಿ ಓಡಾಡುವ ಚಾಳಿ ಉಂಟು, ಅಂತ. ಮತ್ತೊಂದು ಹಳ್ಳಿಯಲ್ಲಿ ನನ್ನ ಕೀರ್ತನೆಗೆ ಅಧ್ಯಕ್ಷತೆ ವಹಿಸಿದ ಮಹರಾಯನನ್ನು ಉದ್ದಕ್ಕೂ ಎಚ್ಚರವಾಗಿರಿಸುವುದಕ್ಕೆ ನಾನೊಬ್ಬ ಆಸಾಮಿಯನ್ನು ಹಿಡಿದು, ಮಂಗಳಾರತಿಯವರಿಗೆ ನಿದ್ದೆಮಾಡಿಸದೆ ಇದ್ದರೆ, ಆತನಿಗೆ ಒಂದು ರೂಪಾಯಿ ಕೂಲಿ ಮಾತನಾಡಿದ್ದೆ. ಆದರೆ, ಅರ್ಧಕತೆಯಲ್ಲೇ, ಅಂಜನೇಯ ಲಂಕೆಗೆ ಹಾರುವ ಮೊದಲೇ ಅಧ್ಯಕ್ಷ ನಿದ್ದೆಮಾಡಿಬಿಟ್ಟಿದ್ದ. ಯಾಕೋ, ಅಂತ ಆ ಆಸಾಮಿಯನ್ನು ಕೇಳಿದರೆ ಅವನಂದ, ನೀವು ಒಂದು ರೂಪಾಯಿ ಹೇಳಿದಿರಿ, ಆತ ನನಗೆ ಎರಡು ರೂಪಾಯಿ ಕೊಟ್ಟ ಅಂತ. ಇನ್ನು ನಾವೇನು ಮಾಡೋದು, ಹೇಳಿ.

ಪಟ್ಟಣಗಳಲ್ಲೂ ತಾಪತ್ರಯವೇ. ಅಲ್ಲಿ ಜನ ಸೇರುವುದೇ ಕಷ್ಟ. ಸೇರಿದರೂ ಕೂರುವ ಜನ ಸಿಗುವುದೇ ಇಲ್ಲ. ರಸ್ತೆ ರಿಪೇರಿಗೆ ಅಂತ ಅಲ್ಲಲ್ಲಿ ಜಲ್ಲಿಕಲ್ಲುಗಳ ರಾಶಿಗಳು ಬೇರೆ, ಐದು ನಿಮಿಷ ಹತ್ತು ನಿಮಿಷ ಇಣಿಕಿನೋಡಿ, ಜನ ಪ್ರತಿ

ಭಟನೆ, ಮುಷ್ಕರ, ಚಳುವಳಿ ಅಲ್ಲ ದೇವರ ವಿಷಯ, ಅಂತ ತಿಳಿಯುತ್ತಲೂ ಪಲಾಯನ ಮಾಡುತ್ತಾರೆ. ಅದಕ್ಕೋಸ್ಕರ ನಾವೂಕೂಡ, ಭಕ್ತಿ ವೈರಾಗ್ಯ ದೇವರು ದಿಂಡರು ಎಂಬ ಸುದ್ದಿಯನ್ನೇ ಎತ್ತದೆ, ರಷ್ಯಾ ಕೋರಿಯಾ " ಮುಷ್ಕರಂ ದುಷ್ಕರಂ ತಥಾ; ಕಾಳಸಂತೆ, ಕುದುರೆ ಜೂಜು ಇತ್ಯಾದಿ ನಾಗರಿಕ ವಿಷಯಗಳನ್ನೇ ಉದ್ದಕ್ಕೂ ಹೇಳುತ್ತಿರಬೇಕಾಗಿದೆ. ಅಣುಬಾಂಬಿಲ್ಲದೆ ನಾವು ' ಅಣೋರಣೀಯಸಾ....' ಎಂದು ಹಾಡುವಂತೆಯೇ ಇಲ್ಲ. ದೇವಕಿ ಅಂದ್ರೆ ಪಟ್ಟಣದವರು ದೇವಕಿ ಬೋಸನ್ನೇ ಸ್ಮರಿಸುತ್ತಾರೆ, ಇಂದ್ರ ಕೃಷ್ಣ ಕೈಲಾಸ ಅಂದರೆ.

ಕೀರ್ತನದ ಉದ್ದಕ್ಕೂ ನಾವು ಕಾಸಿನ ವಸೂಲಿ ವಿಷಯ ನೆನಪು ಕೊಡುತ್ತಿರಬೇಕು. ಹಾಗೆ ಜ್ಞಾಪಿಸಿದರೂ, ಕಿಸೆಯಲ್ಲಿನ ಚಿಲ್ಲರೆ ಎಣಿಸಿ, ಬಸ್ ಚಾರ್ಜು ಹೋಟಲು ಖರ್ಚು ಪೇಪರಿನ ಬೆಲೆ ರೇಸ್‌ನ್ಯೂಸ್ ಖರೀದಿ ಇಷ್ಟನ್ನೂ ಅಲ್ಲೇ ಇರಿಸಿ ಕೊಂಡು ಉಳಿದದ್ದನ್ನು ಮಾತ್ರ ತಟ್ಟೆಗೆ ಹಾಕುತ್ತಾರೆ. ಮೊನ್ನೆ ಒಂದು ಪಟ್ಟಣದಲ್ಲಿ ತಟ್ಟೆಯೇ ಮಂಗಮಾಯವಾಯಿತು. ಸೊಗಸಾದ ಹಿತ್ತಾಳೆ ತಟ್ಟೆ —ಎರಡೂಕಾಲು ರೂಪಾಯಿನದು. ಮೃದಂಗದವರು ಇರಿಸಿಕೊಂಡಿದ್ದ ಗೋಧಿರವೆ ಪೊಟ್ಟಣವೇ ಪರಾರಿ. ಅದರ ಗೌಸನ್ನು ಒಂದು ಮಗು " ತಸ್ಕರಾ ಣಾಂಪತೆ " ! ನಮಗುಳಿದದ್ದು ತಾಳ ಒಂದೇ ಹೇಗಿದೆ? ನಮ್ಮ ಬದುಕು ?

—ರಘುದಾಸ.



"ಅದೋ ಆ ಮರದ ಮುಂದೆ ಖಾಲಿ ಜಾಗ ಬಿಟ್ಟಿದೆಯಲ್ಲಾ, ಅದೇ ನನ್ನದು. ನೂರು ರೂಪಾಯಿ ಅಡ್ವಾನ್ಸ್ ಕೊಟ್ಟು, ತಿಂಗಳಿಗೆ ಹತ್ತು ರೂಪಾಯಿ ಬಾಡಿಗೆ ಕೊಡೋದಾದ್ರೆ ನಿನಗೆ ಬಿಟ್ಟುಕೊಡ್ತೀನಿ."

ಮುಚ್ಚು ಬಾಗಿನ

(ಅಮ್ಮನೋರ ಸೇವೆ)

ಬಂದು ಹದಿನೈದು ದಿನವೇ ಆದರೂ ಆಫೀಸರ ಹೆಸರು ಎಲ್ಲರ ಬಾಯಲ್ಲೂ ಓಡಾಡುತ್ತಿತ್ತು; ಕಾಸು ಕಣ್ಣೆತ್ತಿ ನೋಡರಂತೆ, ಅರ್ಜಿಗೆ ಚೆಕ್ಕು ಅಂಟಿಸಿದರೆ ಕುರ್ಚಿಯಿಂದೆದ್ದು ಹೋಗುವರಂತೆ, ಸರ್ವೆಂಟ್ಸನ ದಾಕ್ಷಿಣ್ಯಕ್ಕೆ ಸಹ, ದಕ್ಷಿಣೆ ಕೇಳರಂತೆ! ಊರಿನ ಹೆಂಗಸರೆಲ್ಲಾ ಸಧ್ಯ ಈ ಸಾರಿಯಾದರೂ ಹಬ್ಬಕ್ಕೊಂದು ಸೀರೆ ಯಜಮಾನರಿಂದ ವಸೂಲ್ಮಾಡಬಹುದೆಂದು ಹಿಗ್ಗಿದರು.

ಆದರೆ, ಗೌರೀಹಬ್ಬದ ಹಿಂದಣದಿನ, ಝುರ್ ಅಂತ ಪಾಂಟಿಯಾಕ್ ಇಳಿದು ಪಡಸಾಲೇಲಿ " ಅಮ್ಮಾವ್ರು " ಬಂದು ನಿಂತಾಗ ಸರಸೂ ನಿಜವಾಗಿ ಗಡಿಬಡಿಯಾಗಿ ಬಿಟ್ಟಳು. ಆತನ ವಿಷಯವೇನೋ ಗಂಡನಿಂದ ಬಲ್ಲಳು. ಆದರೆ ತಾನೇ ಆಕೆ, ಗುಮಾಸ್ತಣೀ ಮನೇಗೆ ಬಂದು ಬಿಡೋದೇ! ಗಾಭರಿಯಲ್ಲಿ, ಚಾಪೆ ಹಾಸಲು ಹೋಗಿ ಹಾಸೆಗೇನೇ ಹಾಸಿಬಿಟ್ಟಳು, ಹರಡಿದ್ದ ಸಾಮಾನು ಹಿಂದಿಡಹೋಗಿ, " ಹಳೇ ಪೇಪರ್ ಖಾಲೀ ಸೀಸಾಯಿ " ಅಂಗ್ಡೀ ಆಯ್ತು ಹಜಾರ!

" ನಾಳೆ ಗೌರೀ ಕೂಡಿಸ್ತೇನೆ, ನಮ್ಮ ಮನೆಗೇ ಪೂಜೆಗೇ ಬಂದು ಬಿಡೀಮ್ಮಾ " ಎಂದರು ಅಮ್ಮಾವ್ರು.

" ಇದೇನಮ್ಮಾ, ನಮ್ಮಂಥಾ ಬಡವರಿಗೆಲ್ಲಾ ? " ಎಂದಳು ಸರಸು ತಡವರಿಸುತ್ತಾ.

" ಏನಿಲ್ಲಮ್ಮಾ, ಹಾಗಂದರೇನು! ಎಲ್ಲರನ್ನೂ ಕರೆದಿದೇನೆ. ಪೇಟೆ ಪದ್ಮ ರಾಜಪ್ಪನೋರ ಪತ್ನಿ, ಕೋಟೆ ಕಾಮಾಕ್ಷ್ಯಯ್ಯನೋರ ಕುಟುಂಬ, ಗೋಪುರದ ಗಂಗೋಜಿರಾಯರ ಸಂಸಾರ, ವಿಶ್ವೇಶ್ವರಪುರದ ಅಶ್ವತ್ಥನಾರಾಯಣರಾಯರ ಅರ್ಧಾಂಗಿ, ಎಲ್ಲರೂ ಬರ್ತಾರೆ ನಡೀಲೇಳಿ, ವಿಜೃಂಭಣೆಯಿಂದ ಪೂಜೆ " ಎಂದರು.

" ಏನೋ ನಿಮ್ಮಭಿಮಾನ ! "

" ಅಯ್ಯೋ ಹಾಗಂದರೇನಮ್ಮಾ; ಎಲ್ಲರು ಮಾಡೋದೂ ಪೂಜೆತಾನೇ; ಅಮ್ಮನೋರ ಸೇವೆ "


ವಿಜೃಂಭಣೆಯಾಗೇ ನಡೆಯಿತು ಪೂಜೆ. ಅಧಿಕಾರಿಣಿ ಆತಿಥ್ಯ ಗೌರಮ್ಮನಿಗೆ, ವಿದ್ಯುದ್ದೀಪದ ಅರೆಯೇ, ಮಂಟಪಕ್ಕೆ ಕಡಿಮೆಯೇ ಹಣ್ಣು ಹೂಗಳಿಗೆ ಬರವೇ ! ಊರಿನ ಮುಕ್ಕಾಲು ಮೂರುಪಾಲು ಪ್ರಮುಖರ ಮನೆ ಹೆಂಗಸರೆಲ್ಲಾ ಬಂದಿದ್ದರು.

ಪೂಜೆ ಮುಗಿದನಂತರ ಮನೆಯಾಕೆಗೊಂದು ಮೊರದಜೊತೆ ಕೊಡುವುದು ಮಾಮೂಲು. ಪೂಜೆ ಮಾಡಿದವರೆಲ್ಲಾ ಆಕೆಗೆ ಮೊರದ ಬಾಗಿನ ಕೊಟ್ಟರು. ಮುಚ್ಚುಬಾಗಿನವನ್ನು ಎತ್ತಿರಿಸುವುದು (ಗುಮಾಸ್ತಿಣಿಯಾದ್ದರಿಂದ) ನರಸು ಪಾಲಿಗೆ ಬಿತ್ತು. ಎತ್ತಿಡುತ್ತಾ ಮೆಲ್ಲನೆ ಮುಚ್ಚಲವೆತ್ತಿ ನೋಡುತ್ತಾ ಬಂದಳು. ಕಾಮಕ್ಕಯ್ಯನೋರ ಮನೆಯಲ್ಲಿ ಕಾಶೀ ಪೀತಾಂಬರ, ಶೆಟ್ಟರ ಮನೇದು ಶೀಲಂ ಪತ್ತಲ, ಪದ್ಮರಾಜಪ್ಪನೋರ ಮನೇಲಿ ಪಟ್ಟೇ ಬೆಳ್ಳಿಬಟ್ಟಲು ಜೋಡಿ, ಮೈಲಾರಯ್ಯನೋರ ಮನೇದು ಮೈಸೂರು ಸಿಲ್ಕು, ಹೀಗೆ ಒಟ್ಟು ಒಂದು ಡರ್ಜ ಬೆಳ್ಳಿ ಪಾತ್ರೆಗಳು ಸಂದಿದ್ದುವು.

ಮನೆಗೆ ಬರುವ ಮುನ್ನ, ಅರಸಿನ ಕುಂಕುಮದ ತಟ್ಟೆಯಲ್ಲಿ ತೆಗೆದುಕೊಂಡು ಹೋಗಿದ್ದ ಗಂಧದ ಬಟ್ಲನ್ನು ಗಲಬರಿಸಿ, ಮೊರದೊಳಗಿಟ್ಟು ಕೊಟ್ಟು ಬಂದಳು ಸರಸೂ !

—ಟಿ. ಸುನಂದಮ್ಮ.

—o—



"ಬೊಂಬೆ ಓದೋಕೆ ಬರದವರು, ಅಕ್ಷರಗಳನ್ನ ಓದಿಕೋಳ್ತಾರೆ."

ಆತುರಗಾರ

" ಕಾಮನ ಬಿಲ್ಲು ! ತಾವರೆ ! ಜಾಜಿ ! ತಾರೆಯ ದಿಬ್ಬಣ !
ಸಾವಧಾನದಲಿ ಹರಿಯುವ ಹೊಳೆಯನು ನೋಡಿರೋ, ಬನ್ನಿ ! "
" ಟ್ರೇನಿಗೆ ಲೇಟು. ಆಫೀಸ್ ಟೈಮು,
ಬ್ರೇನಿಗೆ ಹೀಟು, ಕಾಫೀ ಟೈಮು. "

" ತಣ್ಣನೆ ತೀಡುವ ಸುನಿಲೆಲರಲ್ಲಿ ! ಕೋಗಿಲೆ ಇಂಚರ !
ಕಣ್ಣಿಗೆ ಹಬ್ಬವು, ಮನನಿಜಗಾನ ! ಕೂಡಿರಿ ಕೊಂಚ ! "
" ಅಳಿಯನ ಕಾಟ, ಬೀಳಿಯನ ಕೂಟ
ಶ್ರೀಯುತ ಭಾಷಣ, ಹೋಗಲಿ ಬೇಕು "

" ಹುಲ್ಲಲಿ ಹೊರಳಿ ಮೋಡದ ಮಾಟವ ಸಭೆಯಲಿ ನೋಡಿರಿ
ಸೊಲ್ಲನು ಮರೆತು. ಹುಲ್ಲೆಯ ತೆರದಲಿ ಚಂಗನೆ ನೆಗೆಯಿರಿ "
" ಅಯ್ಯೋ ! ಸಾಲದ ಕಂತನು ಕಟ್ಟಲು,
ಕುಯ್ಯೊ ! ಮರ್ರೊ ! ಗಲ್ಲಿಗೆ ನುಗ್ಗಿವೆ. "

" ಹಾಡುವ ಹಕ್ಕಿಗಳಿನಿದನಿ ಕೇಳಿ, ಪಾಡುವ ಬನ್ನಿರಿ
ಓಡುವ ಮರಳಲಿ, ಕೂಡುವ ದಡದಲಿ, ಮರದಡಿಯಲ್ಲಿ. "
ಪೊಟ್ಟೆ, ಬಟ್ಟೆ. ಮುಹಡೀ, ಮೋಟರು
ಡಾಕ್ಟರು, ಆ ಕಂಟ್ರಾಕ್ಟರ ಹಾವಳಿ—
ನಿಂತೆ ಅಂದರೆ ಕೆಟ್ಟೇ ನಾನು ;
ಕಾಟ: ಊಟ, ಓಟವೆ, ನನಗೆ.

– ಸಾಟಾಳಿ.

ಅತ್ಯಗತ್ಯ ಸಂಸ್ಥೆ

ಮಾತುಸಾಕಿನ್ನು ! ಏಳಿ ! ಕಾರ್ಯೋನ್ಮುಖರಾಗೋಣ !

ಭಾಷಣ— ಖಂಡನ—ಮಹಾ ಸಭೆಯ ೨೩ನೆಯ ಮಹಾಧಿವೇಶನ

ಕಾರ್ಯಕ್ರಮ

೧. ಪ್ರಾರ್ಥನೆ—ಸಂಸ್ಕೃತ, ಕನ್ನಡ, ಉರ್ದು, ತಮಿಳು, ತೆಲುಗು ನುಡಿಗಳಲ್ಲಿ.

೨. ಸ್ವಾಗತೋಪನ್ಯಾಸ— ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷಿಣಿಯರಿಂದ.

೩. ಉದ್ಘಾಟಕರ ಆಶೀರ್ವಚನ—(ಸೋದರ ಸದ್ಗೃಹಸ್ಥರನ್ನುದ್ದೇಶಿಸಿ)
ಉದ್ಘಾಟಕಿಯವರ ಆಶೀರ್ವಚನ (ಮಹಿಳೆಯರನ್ನುದ್ದೇಶಿಸಿ)
ಬಾಲೋದ್ಘಾಟಕನ ನಲ್ಮಾತು (ಬಾಲಕ ಬಾಲಕಿಯರನ್ನುದ್ದೇಶಿಸಿ)

೪. ಪರಿಚಯೋಪನ್ಯಾಸ—ಪರಿಚಿತ ಮಹನೀಯರೊಬ್ಬರಿಂದ

೫. ಅಧ್ಯಕ್ಷರ ಪೀಠಿಕೋಪನ್ಯಾಸ (ಕೇವಲ ಸಾಂಪ್ರದಾಯಿಕ)

೬. ಸಂದೇಶ ಪಠನ—ಕಾರ್ಯಗೌರವದಿಂದ ಸಭೆಗೆ ಬರದೆ ಇರುವವರು ಏಕೆ ಬರಲಿಲ್ಲವೆಂಬ ಕಾರಣಗಳನ್ನು ತಿಳಿಸುವಿಕೆ; ಇಪ್ಪತ್ತಕ್ಕೆ ಕಡಿಮೆ ಇಲ್ಲದಂತೆ ಆರಿಸಿ ಓದಲಾಗುವುದು.

೭. ಠರಾವುಗಳನ್ನು ಮಂಡಿಸಿ ಅನುಮೋದಿಸಿ ಪುಷ್ಟೀಕರಿಸಿ ಅಂಗೀಕರಿಸುವುದು.

(i) ಇನ್ನು ಮುಂದೆ, ಭಾಷಣಗಳಿಗೆ ತಿಲಾಂಜಲಿಯನ್ನರ್ಪಿಸಿ, ಪ್ರತಿ ಒಬ್ಬ ದೇಶನಾಯಕನೂ ದೇಶಸೇವಕನೆನಿಸಿ ಕೆಲಸ ಕಾರ್ಯಗಳಲ್ಲೇ ಹಗಲಿರುಳೂ ನಿರತನಾಗಿರತಕ್ಕದ್ದು.

(ii) ಇನ್ನು ಮುಂದೆ, ಸಭಿಕ ಮಹಾಶಯರೆಲ್ಲರೂ ಭಾಷಣ ಕೇಳುವ ಬದಲು ಪ್ರಯೋಜನಕಾರಿಯಾದ ಅಥವಾ ಹೆಚ್ಚು ಮನರಂಜಕವಾದ ಕೆಲಸಕಾರ್ಯಗಳಲ್ಲಿ ನಿರತರಾಗತಕ್ಕದ್ದು.

(iii) ಭಾಷಣಕಾರರಿಗಾಗಿ ಕಾದು ಕುಳಿತಿರುವ, ಭಾಷಣವನ್ನು ಕೇಳಿ ಆಕಳಿಸುವ, ಸಮಯವನ್ನೆಲ್ಲ ಇನ್ನುಮುಂದೆ ಮಹಾ ಜನಗಳು ಆಹಾರೋತ್ಪತ್ತಿ ಅರಣ್ಯೋತ್ಪತ್ತಿ ಕೋತಿ ಸಾಗಾಣಿಕೆ ಗೃಹಕೈಗಾರಿಕೆ ಸಂತಾನ ನಿರೋಧ ಮುಂತಾದ ಆಧುನಿಕ ರಚನಾತ್ಮಕ ಕೆಲಸಗಳಲ್ಲಿ ವಿನಿಯೋಗಿಸತಕ್ಕದ್ದು.

(iv) ವಾರಕ್ಕೊಂದು ಸಲವಾದರೂ ಪ್ರತಿ ಒಂದು ಹಳ್ಳಿಯಲ್ಲೂ 'ಮಾತು ನಿಲ್ಲಿಸಿ' ಎಂಬ ಚಳುವಳಿ ಹೂಡಿ, ಮಹಾ ಸಭೆಗಳನ್ನು ನಡೆಸತಕ್ಕದ್ದು; ಆಗಿನ ಕಾರ್ಯಕ್ರಮ ಈ ಅಧಿವೇಶನದಂತೆಯೇ ಹೆಚ್ಚು ಕಡಿಮೆ ಇರತಕ್ಕದ್ದು.

(v) ತಿಂಗಳಿಗೊಂದರಂತೆ ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲೂ ಮೂರು ತಿಂಗಳಿಗೊಂದರಂತೆ ತಾಲ್ಲೋಕ್ ಟವನ್‌ಗಳಲ್ಲೂ ಆರು ತಿಂಗಳಿಗೊಂದರಂತೆ ಜಿಲ್ಲಾ ನಗರಗಳಲ್ಲೂ, ವರ್ಷಕ್ಕೊಂದು ಬಾರಿ ಬೆಂಗಳೂರಲ್ಲೂ ಈ ಅತ್ಯಗತ್ಯ ಮಹಾ ಸಭೆಯ ವಿಶೇಷಾಧಿವೇಶನ ನಡೆಸತಕ್ಕದ್ದು.

(vi) ಪ್ರತಿ ಹೋಬಳಿಗೂ ನಾಲ್ಕು ನಾಲ್ಕರಂತೆ ಸತ್ಕುಲ ಪ್ರಸೂತರೂ ಕೆಲಸಪ್ರಿಯರೂ ಆದ ಪ್ರಚಾರಕರನ್ನು ನೇಮಿಸಿ. ಅವರ ಉಪನ್ಯಾಸಗಳ ಮೂಲಕ ಜನರಲ್ಲಿ ಮಹಾಸಭೆಯ ಸದುದ್ದೇಶ ಹರಡುವಂತೆ ಮಾಡತಕ್ಕದ್ದು.

೮. ಆಹ್ವಾನಿತ ಮಹಾಶಯರಿಂದ ಉಪನ್ಯಾಸಗಳು (ಒಂದೂವರೆ ಗಂಟೆಯಿಂದ ಹಿಡಿದು ಎರಡೂವರೆ ವರೆಗೂ ಕಾಲಾವಕಾಶವಿದೆ, ಪ್ರತಿ ಒಬ್ಬರಿಗೂ; ಆದ್ದರಿಂದ, ಸಭಿಕರು ಚಪ್ಪಾಳೆ ಇತ್ಯಾದಿ ಹೊಡೆದು ಗದರಿಸಕೂಡದೆಂದು ಕಾರ್ಯಕರ್ತರ ಸವಿನಯ ಬೇಡಿಕೆ)

(i) ಉಪನ್ಯಾಸಗಳ ಹವ್ಯಾಸ—ಮಾನ್ಯರೊಬ್ಬರಿಂದ

(ii) ಜಿಹ್ವಾ ಚಾಪಲ್ಯ—ಪಂಡಿತವರ್ಯರೊಬ್ಬರಿಂದ

(iii) ಭಾಷಣಕಾರರೋ ಭೀಷಣಕಾರರೋ? - ಸಭಿಕವೃಂದದ ಪರವಾಗಿ ಒಬ್ಬರಿಂದ.

(iv) ಹನುಮಂತನ ಬಾಲ—ಬಾಲಕನೊಬ್ಬನಿಂದ

(v) ಮಾತಿನ ಮಲ್ಲಿ---ಮಹಿಳಾಗೋಷ್ಠಿಯ ಪ್ರತಿನಿಧಿಯಿಂದ

೯. “ ಮೂಕೋಪಾಖ್ಯಾನ ” ....ಕೀರ್ತನ .. ಸಪ್ತಾಹ ಪ್ರವೀಣ ಪೈಲ್ವಾನ್.......ಒಬ್ಬರಿಂದ.

೧೦. ಸದರಿ ಅವರಿಗೆ ಸಂಭಾವನಾ ವಿನಿಯೋಗ

೧೧. ಸದರಿ ಅವರ ವಂದನಾರ್ಪಣೆ ಮತ್ತು ಅವರನ್ನು ಪ್ರತಿವಂದಿಸಿ ಬೀಳ್ಕೊಡುವಿಕೆ

೧೨. ಅಧ್ಯಕ್ಷರಿಂದ ಎಲ್ಲರಿಗೂ ಹಿತೋಪದೇಶ


೧೩. ಉಳಿದ ಮಾನ್ಯಮಹನೀಯರುಗಳ, ಮಹಿಳೆಯರುಗಳ, ಬಾಲಕರ ವಂದನಾರ್ಪಣೆ (ಕಾರ್ಯಕರ್ತರಿಗೆ)

೧೪. ಮುಂದಿನ ಅಧಿವೇಶನದ ಸ್ಥಳ, ಕಾಲ. ಇವುಗಳ ಚರ್ಚೆ, ನಿರ್ಧಾರ

೧೫. ಕಾರ್ಯಕರ್ತರ ಪರವಾಗಿ ಸಮಸ್ತರಿಗೂ ವಂದನಾರ್ಪಣೆ

೧೬. ಮುಕ್ತಾಯ ಘೋಷಣ.

[ಭಾಷಣ—ಖಂಡನ ಮಹಾಸಭೆಗೆ ಸದಸ್ಯರಾಗಲಿಚ್ಛಿಸುವವರು ಒತ್ತಾಯ ರೂಪವಾಗಿ ಚಂದಾ ಹಣ ಕೊಡಬೇಕಾಗಿಲ್ಲ; ಮಹಾ ಸಭೆಯ ಉದ್ದೇಶದಲ್ಲಿ ಸಂಪೂರ್ಣ ನಂಬಿಕೆ ಇದ್ದು, ಅದರ ಕೆಲಸಕಾರ್ಯಗಳಲ್ಲೂ ಪ್ರಚಾರದಲ್ಲೂ ಭಾಗವಹಿಸಲು ಉಪನ್ಯಾಸ ಕೊಡಬಲ್ಲ ಎಲ್ಲರೂ ಕಾರ್ಯಕರ್ತರನ್ನು ಕಂಡು ಹೆಸರುಗಳನ್ನೂ ವಿಷಯಗಳನ್ನೂ ತಿಳಿಸಬಹುದು. ಅವರೆಲ್ಲರಿಗೂ ಯಾವಾಗಲೂ ಸುಸ್ವಾಗತವಿದೆ.]



ಕಿಸೆಯಿಂದ ಬಿದ್ದಿದ್ದ ಕಾಗದ

ಮಾತೋಶ್ರೀಯವರ ಚರಣ ಸನ್ನಿಧಾನಂಗಳಲ್ಲಿ ಬಾಲಕ ರಾಮು ಮಾಡುವ ಅನಂತಾನಂತ ನಮಸ್ಕಾರಗಳು. ನಾನು ಈವರೆಗೆ ಕ್ಷೇಮವಾಗಿದೇನೆ. ಅಲ್ಲಿ ನಿಮ್ಮ ಮತ್ತು ಅಕ್ಕಮ್ಮ, ಅಣ್ಣಯ್ಯ, ತಮ್ಮ, ಮರಿ ಇವರ ಕ್ಷೇಮ ಸಮಾಚಾರಗಳಿಗೆ ಕಾಗದ ಬರೆಯುವುದು. ನಾನು ಇಲ್ಲಿ ಬೋರ್ಡಿಂಗ್‌ನಲ್ಲಿದೇನೆ. ಕಾಲೇಜು ಸೇರಿದೇನೆ. ದಿನವೂ ರಾತ್ರಿ ೨, ೨-೪೫ರವರೆಗೆ ಓದುತ್ತಿದೇನೆ; ಬೆಳಗಿನ ಜಾವ ೪-೩೦ಕ್ಕೇ ಎದ್ದು ಮತ್ತೆ ಓದುತ್ತಿದೇನೆ. ಎಷ್ಟು ಓದಿದರೂ ಮತ್ತೆ ಮತ್ತೆ ಓದಬೇಕೆಂಬ ಆಸೆಯಾಗುತ್ತಿದೆ. ಪುಸ್ತಕಗಳೂ ಕೂಡ ಬಹಳ ದಪ್ಪದಪ್ಪ. ಆದ್ದರಿಂದ, ಮೊನ್ನೆ ಕೊಂಚ ತಲೆನೋವು ಜ್ವರ ಬಂತು. ಡಾಕ್ಟರನ್ನು ಕೇಳಲು ಅವರು ಒಂದು ಟಾನಿಕ್ ಹೇಳಿದಾರೆ. ಅದಕ್ಕಾಗಿ ೧೫ ರೂಗಳು ತಕ್ಷಣ ಕಳುಹಿಸಬೇಕು. ಪುಸ್ತಕಗಳು ಇನ್ನೂ ೫೦ ರೂ.ಗೆ ಕೊಂಡುಕೊಳ್ಳಲೇ ಬೇಕಂತೆ; ಇಲ್ಲದಿದ್ದರೆ, ಕ್ಲಾಸಿಗೇ ಸೇರಿಸುವುದಿಲ್ಲವಂತೆ.

ಎದುರು ಮನೆ ಎಂಕಣ್ಣ ಇಲ್ಲಿಗೆ ಬಂದವನು ತಿರುಗಿ ಊರಿಗೆ ಬಂದು ನಿಮ್ಮ ಹತ್ತಿರ ನನ್ನ ವಿಷಯ ಏನೇನೋ ಚಾಡಿ ಹೇಳಿದಾನೆ ಎಂದು ತೋರುತ್ತೆ. ನಾನು ಚೆನ್ನಾಗಿ ಓದುವುದರಿಂದಲೂ ಇತರೆ ಹುಡುಗರಂತೆ ಪೋಲಿ ತಿರುಗದೆ ಇರುವುದರಿಂದಲೂ. ನನಗೆ ಆಗದವರು ಇಲ್ಲಿ ಬಹಳ ಇದಾರೆ. ದೊಡ್ಡ ಊರಲ್ಲಿ ಹೊಟ್ಟೆಕಿಚ್ಚಿನವರು ಬಹಳ. ನನ್ನಂತಹ ಬಡವ ಮುಂದಕ್ಕೆ ಬರುವುದೆಂದರೆ, ಅವರಿಗೆ ಸಹನೆ ಇಲ್ಲ. ಅವರು ಎಂಕಣ್ಣನ ಹತ್ತಿರ ನಾನು ಅವತ್ತು ಸಿನಿಮಾಗೆ ಹೋಗಿದ್ದೆ ಅಂತ ಹೇಳಿರಬೇಕು; ನನಗೆ ಹಾಸ್ಟಲೆಲ್ಲ ಸಾಲ ಅಂತ ಹೇಳಿರಬೇಕು. ಊರಲ್ಲಿ ಟೆಂಟ್ ಹಾಕಿ ಸಿನಿಮ ಬಂದಿರಲಿಲ್ಲವೆ,—ಮಯೂರ ಧ್ವಜ—ಅದನ್ನೇ ನಾನು ನೋಡಿರುವುದು. ಬೆಂಗಳೂರಲ್ಲಿ ಸಿನಿಮ ಎಲ್ಲಿದೆ ಅಂತ ಅನ್ನೋದೂ ಕೂಡ ನಾಕಾಣೆ. ನಿನ್ನ ಹತ್ತಿರ ನಾನು ಸುಳ್ಳು ಹೇಳಬೇಕೆ? ಎಂಕಣ್ಣ ಬಂದಿದ್ದಾಗ, ನಾನು ಒಂದು ಪುಸ್ತಕ ಕೊಂಡುಕೊಳ್ಳೋದಕ್ಕೋಸ್ಕರ ಭಾರಿ ಅಂಗಡಿ ಹುಡುಕಿಕೊಂಡು ಹೋಗಿದ್ದೆ. ಈ ಸಾರಿ ಪರೀಕ್ಷೇಲಿ ನನಗೆ ನಂಬರು ಬಂದಿದೆ; ನನ್ನಂಥ ಹುಡುಗನೇ ನನ್ನ ಕ್ಲಾಸಿನಲ್ಲಿಲ್ಲ ಅಂತ ಮೇಷ್ಟರು ಹೇಳಿದರು. ಮತ್ತೆ, ನೀನು ಆ ಮೆಳ್ಳಗಣ್ಣು ಎಂಕಣ್ಣನ ಮಾತು ಕೇಳುತ್ತ ನನ್ನ ಮೇಲೆ ಕೋಪವಾಗಿದೀಯಲ್ಲಾ......ಹೀಗೆಲ್ಲ ಮಾಡಿದರೆ, ನಾನು ನವರಾತ್ರಿಗೆ ಊರಿಗೇ ಬರುವುದಿಲ್ಲ, ನೋಡಿಕೊ.

ತಕ್ಷಣ ೬೫ ರೂ. ಕಳುಹಿಸು. ಅಕ್ಕಮ್ಮನ ಮಗು ಕೈಬಳೇನ ಮಾರುತ್ತೇನೆ ಅಂತ ಹೇಳಿದೆಯಲ್ಲಾ.......ಮಾರಿಬಿಡು. ಎರಡನ್ನೂ; ಇಲ್ಲದಿದ್ದರೆ

ನನಗೆ ಪೂರ ತಾಪತ್ರಯ. ನಾನು ಇಲ್ಲಿ ಕಾಪಿ ಕುಡಿಯುತ್ತಿಲ್ಲ; ಅತೀ ಉಷ್ಣ ಅಂತ ನೀನೇ ಹೇಳಿದ್ದಿ. ಬೀಡಿ ಸಿಗರೇಟು ಯಾರಾದರೂ ಒಂದು ಮೈಲಿದೂರ ಸೇದುತ್ತಿದ್ದರೂ ನನಗೆ ಏನೇನೋ ಆಗುತ್ತೆ, ನಿಜವಾಗಿಯೂ.. ಇಲ್ಲಿ ಒಳ್ಳೆ ಹಾಲು ಸಿಕ್ಕುತ್ತೆ, ಅಪ್ಪಟ ಹಸುವಿನದು. ದಿನವೂ ಮೂರು ಬಾರಿ.... ಇಲ್ಲ ದಿದ್ದರೆ, ಈ ಓದಿನ ಭರಾಟೆಯಲ್ಲಿ ತಲೆ ಚಿಟ್ಟು ಹಿಡಿದುಬಿಡುತ್ತದೆ.

ಇಲ್ಲಿ ಎಲ್ಲರೂ ಉಲ್ಲನ್ ಸೂಟು ಹಾಕಿಕೊಂಡೇ ತಿರುಗಬೇಕಂತೆ. ನಮ್ಮ ಊರಿನವರ ಹಾಗಿದ್ದರೆ, ಗಮಾರ ಅಂತಾರೆ; ನಗುತ್ತಾರೆ. ನನಗೆ ನಾಚಿಕೆ ಯಾಗುತ್ತದೆ. ಚಳೀನೂ ಬಹಳ ಕೊರೆಯುತ್ತದೆ. ಅಂಗಿ ಚಡ್ಡಿ ಇವೆರಡಕ್ಕೂ ಹೊಲಿಗೆ ಕೂಲೀನೇ ೫೦ ರೂ. ಆಗುತ್ತೆ; ಗ್ರಹಚಾರ. ಒಂದೊಂದು ವೇಳೆ, ನಿನ್ನ ಕಷ್ಟ ನೋಡಿದರೆ ನನಗನ್ನಿಸುತ್ತದೆ, ಹಾಯಾಗಿ ಲೋಯರ್ ಸೆಕಂಡರೀಲಿ ಫೇಯಿಲಾಗಿಬಿಟ್ಟಿದ್ದರೆ ಎಷ್ಟೋ ಚೆನ್ನಾಗಿತ್ತು ಅಂತ. ಆದರೆ, ಏನು ಮಾಡುವುದು? ದೈವ ಚಿತ್ತ. ಅನುಭವಿಸಲೇ ಬೇಕು. ನನ್ನ ವಿಷಯವಾಗಿ ಚಾಡಿ ಮಾತು ಕೇಳಿಕೊಂಡು ಯಾರು ಏನು ಅಲ್ಲಿಗೆ ಬಂದು ಹೇಳಿದರೂ ನಂಬಬೇಡ. ತಕ್ಷಣ ೧೫೦ ರೂ. ಅಂಗಿ ಷರಾಯಿಗೆ ಬೇಕೇಬೇಕು. ಅದನ್ನ ಹಾಕಿಕೊಂಡು ಕೂತ ರೇನೇ ಅಂತೆ ಘನವಾದ ವಿಷಯಗಳು ತಲೆಗೆ ಹತ್ತುವುದು. ಅದಕ್ಕೇ ಅಂತೆ ಡಿಪ್ಟಿ ಕಮಿಷನರ್ ಮುಂತಾದವರು ಅದನ್ನೇ ತೊಟ್ಟುಕೊಳ್ಳುವುದು. ನನಗೆ ಅಂಥ ಡಿಪ್ಟಿಯಾಗಬೇಕು ಅಂತ ಆಸೆ. ಮೊನ್ನೆ ಶ್ರಾವಣ ಶನಿವಾರ ರಾತ್ರಿ ನನಗೆ ಕನಸಿನಲ್ಲಿ ತಿರುಪತಿ ವೆಂಕಟರಮಣ ದೇವರು ಕಾಣಿಸಿಕೊಂಡರು. "ಕಂದಾ" ಅಂದ ಹಾಗಾಯಿತು.

ಇತಿ ರಾಮು,
ನೂರೆಂಟು ನಮಸ್ಕಾರ.



ಮಗು ಕೇಳಿತಮ್ಮ! ಮಾತಾಡೋ ಬೊಂಬೆ ಬೇಕು ಅಂತ!
ಅದಕ್ಕೇ ಇದನ್ನು ಕೊಡ್ತಿದ್ದೀನಿ!

ದಯೆ ಮಾಡುವುದು

"ದಯೆ ಮಾಡಿ" ಎಂದರೆ, ಬನ್ನಿ ಎಂಬ ಅರ್ಥವಿದೆ. "ದಯೆ ಮಾಡುತ್ತೀರಾ?" ಎಂದರೆ, ಹೊರಡುತ್ತೀರಾ ಎಂಬ ಅರ್ಥವೂ ಇದೆ. ಬನ್ನಿ ಎಂದರೆ ಹೋಗುವುದಕ್ಕೂ, ಹೊರಡಿ ಎಂದಾಗ ಹೊರಡುವುದಕ್ಕೂ ನನ್ನಲ್ಲಿ ದಯೆ ಸಾಲದು. ಬನ್ನಿ, ದಯೆಮಾಡಿ, ಎಂದು ಆಹ್ವಾನಿಸಿದಾಗ, ಸಂತೋಷದಿಂದ ಆ ಆಹ್ವಾನವನ್ನು ಮನ್ನಿಸುತ್ತೇವೆ. ಆದರೆ, ಅವರು "ದಯೆಮಾಡುತ್ತೀರಾ" ಎಂದು ಹೊರಡಿಸುವಾಗ, ನನಗೆ ಕಾಲೇಳದು. ಅದೊಂದು ಜಾಡ್ಯ ನನ್ನದು. ಕೂತರೆ ಏಳೋದೇ ಕಷ್ಟ ನನಗೆ; ಎದ್ದರೆ ಎಲ್ಲಿಗೆ ಪ್ರಯಾಣ ಎಂಬ ಸಮಸ್ಯೆಯನ್ನು ಬಿಡಿಸುವುದೇ ನನ್ನ ಬುದ್ಧಿಗೆ ಬಳಲಿಕೆ. ಆದ್ದರಿಂದ, ನೀವು ಎಷ್ಟುಸಲ "ದಯೆಮಾಡಿಸಿ" ಎಂದು ಅಂಗಲಾಚಿದರೂ, ನಾನು ಬಿಮ್ಮೆಂದು ಬೇರು ಬಿಟ್ಟೇ ಇರುತ್ತೇನೆ. ಇದೊಂದು ರೋಗ, ನನ್ನ ಸ್ವಂತದ್ದು, ಖಾಯಂ ಖಾಯಿಲೆ.

ಯಾವ ಸಭೆಗೆ ಹೋಗಲಿ, ಯಾವ ಸಮಾರಾಧನೆ ಸಂತರ್ಪಣೆಯೋ ಇರಲಿ, ಎಂಥ ಸಂಗೀತ ಕಛೇರಿಯೋ ಆಗಲಿ, ಯಾವ ಮಂತ್ರಿಯ ಭಾಷಣವೇ ಆಗಲಿ, ಕಡೆಗೆ ಬಬ್ಬ ಕಾರ್ಖಾನೆ ಮ್ಯಾನೇಜರ ಭಾವ ಚಿತ್ರ ಅನಾವರಣವೇ ಆಗಿರಲಿ— ಎಲ್ಲರೂ ಎದ್ದಮೇಲೆ ಕಡೆಗೆ ಮನಸ್ಸಿಲ್ಲದ ಮನಸ್ಸಿಂದ ಕುರ್ಚಿಯಿಂದ ಏಳುವ ಶೋಂಭೇರಿ, ಹೇಡಿ, ಯಾರೆಂದರೆ, ನಾನು!

ಉಳಿದವರೆಲ್ಲ ಮರ್ಯಾದೆಗೋಸ್ಕರ ಕೊಂಚಹೊತ್ತು ಕೂತು, ಹಲ್ಲು ಕಿರಿದ ನಂತರ ಯಾವುದೋ ಸಬೂಬು ಹೇಳಿಕೊಂಡು ಕಂಬಿ ಕಿತ್ತೇಬಿಡುತ್ತಾರೆ; ನನಗೂ ಸಬೂಬಿಗೂ ಬಲುದೂರ. ಊಟ ಮುಗಿಸಿ ಕೈ ತೊಳೆದುಕೊಂಡ ತಕ್ಷಣ ಅತಿಥಿಗಳ ಪೈಕಿ ವೈದ್ಯರುಗಳೆಲ್ಲ ಅರ್ಜಂಟ್ ಕೇಸುಗಳ ನೆಪ ಹೂಡಿರುತ್ತಾರೆ; ಲಾಯರುಗಳಿಗೆ ಕಕ್ಷಿಗಾರರ ಅವಾಂತರ ಎಂಬ ನೆಪ ಇದ್ದೇ ಇದೆ; ಶಾಲಾ ಮಾಸ್ತರುಗಳು —(ಅವರನ್ನು ಯಾರು ಊಟಕ್ಕೆ ಕರೆಯುತ್ತಾರೆ? ಅಪ್ಪಿ ತಪ್ಪಿ ಕರೆದರೂ, ಅವರು) ನಾಳಿನ ಪಾಠಗಳನ್ನು ಓದಿಕೊಳ್ಳಬೇಕೆಂದು ಹೇಳಿ ತಪ್ಪಿಸಿಕೊಳ್ಳುತ್ತಾರೆ; ಪತ್ನಿಯರಿಗೆ ಆರೋಗ್ಯ ಸರಿಯಾಗಿಲ್ಲ, ಮಗುವಿಗೆ ಜ್ವರ, ಮೋಟಾರಿಗೆ ರಿಪೇರಿ, ನಾಯಿಗೆ ಕೆಮ್ಮಲು, ರೈಲಿಗೆ ಹೋಗಬೇಕು, ರೈಲಲ್ಲಿ ಬರುವವರಿದಾರೆ, ಎಂಬ ನೆಪಗಳಲ್ಲೊಂದನ್ನೂ ನಾನು ಹೇಳಲಾರೆ—ನನ್ನ ನಾಡೀಗೆ ಬಲ ಕಡಿಮೆ. ಎಲ್ಲರೂ ಪರಾರಿಯಾದ ಮೇಲೂ ನಾನು ಕಾರ್ಯದರ್ಶಿಯ ಸುತ್ತ, ಭಾಷಣಕಾರರ ಹಿಂದೆ, ಅನ್ನದಾತನ ಹತ್ತಿರ ಸುಳಿದಾಡುತ್ತಲೇ ಇರುತ್ತೇನೆ—'ನಾನು ಬರ್ತೀನ್ರಿ' ಎಂದು ಹೇಳಿ ಅವರೇ ನನ್ನ ಕೊಡಹುವ ತನಕ!

ನನ್ನ ಈ ನಿರ್ಬಲತೆಗೆ ನಾನೇ ನಾಚುತ್ತೇನೆ. ತಿಂಗಳಿಗೆ ನಲವತ್ತೋ ಐವತ್ತೋ ತೆತ್ತು, ಒಬ್ಬ ಲೋಯರ್ ಸೆಕಂಡರಿ ಸೋತ ಹುಡುಗನನ್ನ ನನ್ನ ಆಪ್ತ ಕಾರ್ಯದರ್ಶಿಯಾಗಿ ನಿಯಮಿಸಿ, ಅವನ ಬಾಯಿಂದ, "ಯಜಮಾನರಿಗೆ ಮನೆಗೆ ಹೋಗುವ ಹೊತ್ತಾಯಿತು, ಕ್ಷಮಿಸಿ" ಎಂದು ಹೇಳಿಸಿ, ಎಲ್ಲರಂತೆ ಧೈರ್ಯವಾಗಿ ಎದ್ದೇ ಬಿಡೋಣವೋ ಎಂದು ಅನೇಕ ಸಾರಿ ಅನ್ನಿಸಿದೆ. ಆದರೆ, ಲೋಯರ್ ಸೆಕೆಂಡರಿ ಸೋತ ಹುಡುಗ ಯಾವನು ಐವತ್ತು ರೂಪಾಯಿ ಸಂಬಳಕ್ಕೆ ಸಿಗುತ್ತಾನೆ, ಈಗ?

ಮೊನ್ನೆ ನಾನು ಒಬ್ಬರು ಮನಶ್ಶಾಸ್ತ್ರ ಪಂಡಿತರ ಕಿವಿಯಲ್ಲಿ ನನ್ನ ಗೋಳು ಹೇಳಿಕೊಂಡೆ. ಅವರು ಹೇಳಿದರು: "ನಿಮ್ಮ ಒಳ ಮನಸ್ಸಿನ ಮರ್ಮ ನನಗೆ ತಿಳಿಯಿತು. ಭಾಷಣ, ಗಾಯನ, ಭೋಜನ ಮುಂತಾದುವುಗಳಿಗೆ ಹೋದಾಗ ಉಳಿದವರೆಲ್ಲ ಎದ್ದ ಮೇಲೂ, ನೀವು ಕೂತಿರುವುದೇತಕ್ಕೆಂದರೆ, ನೀವು ಆಶಾವಾದಿ. ಇಷ್ಟು ಹೊಲಸಾದ ಮಾತು ಹಾಡು ಊಟ ಇದ್ದರೂ, ಕೊನೆಯ ಗಳಿಗೆಯಲ್ಲಿ ಚಮತ್ಕಾರದ ಒಂದು ತುಣುಕು ಸಿಗುತ್ತದೆ, ತಾಳ ಸರಿಹೋಗುತ್ತೆ, ನಾಲಿಗೆ ರುಚಿ ಹತ್ತುತ್ತದೆ ಎಂಬ ಆಸೆ, ಭರವಸೆ ನಿಮಗೆ; ಎಂಥ ಕೆಸರಿನಿಂದಲೂ ಕಮಲ ವೇಳಬಹುದು, ಎಂಥ ಭೀಷಣದಲ್ಲೂ ಭೂಷಣವುಂಟಾಗಬಹುದು ಎಂಬ ಉದಾತ್ತ ಚಿಂತೆ ನಿಮ್ಮದು" ಎಂದರು. ನನಗೆ ಅರ್ಥವಾಗಲಿಲ್ಲ.

ನನ್ನ ಹಳೆಯ ಮೇಷ್ಟರು ಶಾಮಣ್ಣನವರನ್ನು ಕೇಳಿದೆ. ಅವರಂದರು, "ನೀನು ಯಾವಾಗಲೂ ಹೀಗೇನೆ. ಸ್ಕೂಲಲ್ಲಿ ನಿನ್ನನ್ನ ಒಬ್ಬಂಟಿಗನಾಗಿ ಕತ್ತಲೇ ಕೋಣೆಯಲ್ಲಿ ಕೂರಿಸಿ ಕೂರಿಸಿ ಶಿಕ್ಷಿಸುತ್ತಿದ್ದೆ ನಾನು. ಅದರ ಫಲ ಈಗ ಅನುಭವಿಸುತ್ತಿದೀಯೆ" ಎಂದರು. ಅವರ ತಮ್ಮಂದಿರೊಬ್ಬರಿದಾರೆ, ೬೮ ವರ್ಷದವರು. ಅವರು, "ಲೋ! ನೀನೊಬ್ಬ ಆರಂಭ ಶೂರ, ಆದ್ದರಿಂದಲೇ ಹೀಗಾಗುತ್ತಿರುವುದು. ಸಭೆ ಸಂತರ್ಪಣೆಗಳಿಗೆ ಶೂರನಂತೆ ಹೊರಟುಬಿಡುತ್ತೀಯೆ. ಆದರೆ, ಅಭಿಮನ್ಯುವಿನ ಹಾಗೆ ನುಗ್ಗಬಲ್ಲೆ, ಹೊರಬರಲಾರೆ; ಆರಂಭಶೂರ.... ಆದರೆ, ಸಮಾಪ್ತಿ ಹೇಡಿ ನೀನು" ಎಂದರು.

ಮೊನ್ನೆ ನಾನೇ ಹಲ ಕೆಲವು ಮನಶ್ಶಾಸ್ತ್ರ ಗ್ರಂಥಗಳನ್ನು ಓದಿದೆ. ಆಗ ನನಗೆ ನನ್ನ ಚರ್ಯೆಯ ನಿಜಕಾರಣ ಹೊಳೆಯಿತು. ಹೋದ ಕಡೆ ಕೂತು, ಕೂತ ಕಡೆಯಿಂದ ಏಳಲಾರದೆ, ಅವರು ಅಟ್ಟುವತನಕ ನಾನು ಅಪಮಾನ ಸಹಿಸುವುದು ಏತಕ್ಕೆ ಗೊತ್ತೆ?— ನನ್ನ ಮನೆ ವಾತಾವರಣ ಚೆನ್ನಾಗಿಲ್ಲ. ಕೈ ಹಿಡಿದವಳು ಸಾಕ್ಷಾತ್.....ಬೀರಿ; ಅಂದ ಮೇಲೆ, ಅಂಥ ಮನೆಗೆ ಯಾವ ಮನುಷ್ಯತಾನೆ ಹೋದ ಕಡೆಯಿಂದ ಸಂತೋಷದಿಂದ ಎದ್ದು ಬಂದಾನು? ನೀವೇ ಹೇಳಿ.

—ರಾಮುಪ್ಪ.

ವ್ಯಾಚ್ ರಿಫೇರಿ

ಭಾನುವಾರ ಹೊತ್ತಾಗಿ ಬಂದದ್ದು ನೋಡಿ ಬೈಯ್ಯುವ ಆಫೆಸರ ಕಿರುಕುಳ ವಿಲ್ಲ. ಊಟವಾಗಿತ್ತು; ಹಾಯಾಗಿ ಮನೆ ಮುಂದೆ ಆರಾಮ ಕುರ್ಚಿಯಲ್ಲಿ ಆರಾಮವಾಗಿ ಒರಗಿ ಎಲೆ ಅಡಿಕೆ ಮೇಯುತ್ತಿದ್ದೆ. ಹಾಗೇ ಜೊಂಪುಹತ್ತಿ ನಿದ್ರೆ ಮತ್ತು ಎಚ್ಚರಿಕೆಯ ಮಧ್ಯೆ ಕಾಲಹಾಕುತ್ತಿದ್ದೆ. "ವ್ಯಾಚ್ ರಿಫೇರಿ....ಮಾಡು ತ್ತೇನ್ರಿ....ವ್ಯಾಚ್" ಎಂಬ ಕೂಗು ನನ್ನನ್ನು ಎಚ್ಚರಗೊಳಿಸಿತು. ದಿನವಹಿ ಆಫೀಸಿಗೆ ಹೊತ್ತಾಗಿ ಹೋಗಲು ಕಾರಣವಾದ ಮುರಿದುಬಿದ್ದ ನನ್ನ ಅಲಾರಂ ಗಡಿಯಾರ ಯಾತಕ್ಕೆ ರೀಪೇರಿಮಾಡಿಸಿ ಆಫೀಸರ ಬೈಗಳಿಂದ ಪಾರಾಗ ಬಾರದು? ಎಂಬ ಯೋಚನೆ. ಆ ರಿಪೇರಿಯವನನ್ನು ಕರೆದದ್ದಾಯಿತು. ಕೊಂಕು ಳಲ್ಲಿ ಕೊಡೆಕಡ್ಡಿಕಂತೆ, ಬಗಲಿಗೆ ಒಂದು ಹಳೆ ಟ್ರಂಕು ಉದ್ದನೆಯ ಕ್ರಾಪು ಬಿದಿರುಕಾಲು, ಪೆನ್ಸಿಲ್ ಕೈ, ಆಳವಾದ ಕಣ್ಣು ಗುಳಿಬಿದ್ದ ಗಲ್ಲ. "ಅಯ್ಯೋ ಪಾಪ" ಎಂದೆನ್ನುವ ವ್ಯಕ್ತಿತ್ವ. ಆದರೂ ಆ ಕಣ್ಣಲ್ಲಿ ಹೊಳಪು—ಖದೀಮನ ಕಳೆ ಮುಖದ ಮೇಲೆ....ಬಂದವನೇ ವರಾಂಡದಲ್ಲಿ ತನ್ನ ಅಂಗಡಿ ಹರವಿ ಕುಳಿತ.

"ವ್ಯಾಚ್ ರಿಫೇರಿ ಸಾರ್ "

"ಕೊಡೆ ಬೀಗ ರಿಪೇರಿಯೋನಿದ್ದಾಗೆ ಕಾಣತ್ತೆ, ನೀನು ವಾಚ್ ರಿಪೇ ರೀನೂ ಮಾಡ್ತಿ ಏನಯ್ಯಾ...." ನಿನ್ನ ಯೋಗ್ಯತೆ ಏನು?—ಎಂದು ಕೇಳಿದ ಹಾಗಾಯ್ತು ಅವನಿಗೆ. ಮೂಗು ಅರಳಿಸಿ ತಲೆಕೆರೆದು—"ಬರೆ ವ್ಯಾಚ್ ಯಾಕೆ ಸಾರ್....ರೆಡಿಯೋ ಗ್ರಾಮಾಫೋನು .. ಹೊಲಿಗೆ ಮಿಷೀ....ಮೋಟಾರ್ ....ಇನ್ನೂ ಒಂದು ಕೈ ಏರೋಪ್ಲೇನೂ ರಿಫೇರಿ ಮಾಡಬಲ್ಲೆ...." ಎಂದು ಹುಬ್ಬುಹಾರಿಸಿದ.

"ಅಲ್ಲ ಕೇಳಿದೆ....ಒಂದು ಗಡಿಯಾರ ಇದೆ ಮಾಡ್ತಿಯಾ?"

"ಒಂದೇಕೆ ಸಾವಿರ ಇದ್ರೆ ಕೊಡಿ--" ಎಂದ. ಎದ್ದುಹೋಗಿ ದಿಕ್ಕಿ ಲ್ಲದೆ ಅನಾಥವಾಗಿ ಗೂಡಿನ ಮೂಲೆಯಲ್ಲಿ ಮಲಗಿದ ಧೂಳು ಅಡರಿದ ಗಡಿಯಾರ ತಂದು ಅವನ ಕೈಗೆ ಕೊಟ್ಟೆ. ಹಿಂದೆ ಮುಂದೆ—ಅಲ್ಲಾಡಿಸಿ ತೆಂಗಿನಕಾಯಿ ನೋಡುವಂತೆ ಟಕ್ ಟಕ್ ಎಂದು ಒಡೆದುನೋಡಿ ಆರು ವರ್ಷ ಮೂರು

ಇಪ್ಪತ್ತೆಂಟು ದಿನ ಮೂರು ಘಂಟೆ ಐದು ನಿಮಿಷ ನಡೆದಿದೆ ಸಾರ್ ಟೂರ...." ಎಂದು ಒಂದೇ ಸಲ ಹೇಳಿದ. ನಿಜವಾಗಿ ಅಷ್ಟೇ ನಡೆದಿರ ಐದಾರು ವರ್ಷದ ಕೆಳಗೆ ಕೊಂಡುಕೊಂಡಿದ್ದೆ.

ಇರಬಹುದು...." ಎಂದೆ.

ಬಹುದು ಏನು....ನನ್ನ ಕೇಳಿಸಾರ್ ಹೇಳ್ತೀನಿ, ಇದು ನಿಮ್ಮಲ್ಲಿ ಬಂದ ನಿಮ್ಮ ಹುಡುಗನ ಕೈಯಿಂದ ಜಾರಿ ಬಿದ್ದು ಅಪಘಾತಕ್ಕೀಡಾಯಿತು ?"

ಹೌದು...."

ಆಮೇಲೆ ಪಾರ್ಶ್ವವಾಯು ಬಂದು, ಕೇವಲ ಮಲಗಿದ್ದರೆ ಮಾತ್ರ ನಡೆ ಚಾಳಿ ಕಲಿಯಿತು ಹೌದೊ?...."

"ಅರೆ! ಹೌದಲ್ಲಾ!!...."

"ಆಮೇಲೆ ನೀವೇ ರಿಪೇರಿಮಾಡಲು ಹೋಗಿ ಕಂಡ ಗಾಲಿಗೆಲ್ಲಾ ಕೊಬರಿ ಹಾಕಿ ನೋಡಿದಿರಿ. ಅವತ್ತಿನಿಂದ ಅಲಾರಂ ಐದಕ್ಕಿಟ್ಟರೆ ಎಂಟಕ್ಕೆ ಯತೊಡಗಿತು ...ನೀವು ಮೂರಕ್ಕಿಟ್ಟು ಐದಕ್ಕೆ ಏಳುತ್ತಿದ್ದಿರಿ....ಅಲ್ಲಿಂದ ಒಂದು ದಿನ ಹಠಾತ್ತಾಗಿ ಗಡಿಯಾರದ ಹೃದಯ ಕ್ರಿಯೆ ಹಾಗೇ ನಿಜವೆ?...."

"ಅದೆಲ್ಲಾ ನಿಜ, ಮಹರಾಯ, ಇದರ ರಿಪೇರಿ ಮಾಡುವ ಕೆಲಸ ಪ್ರಾರಂ ...ಎಷ್ಟು ಚಾರ್ಜು ಹೇಳಬಾರದೆ?...."

"ಅಲ್ಲ ನೀವು ಅನುಮಾನ ಮಾಡಿ ಕೇಳಿದಿರಲ್ಲಾ ಅದಕ್ಕೆ ಹೇಳಬೇಕಾಯ್ತು ನೀವೇನು ಸ್ವಾಮಿ, ಇನ್ನೂ ನನಗೆ ಸಿಕ್ಕ ಗಿರಾಕಿಗಳು ಏನೇನೋ ಕೇಳಿವೆ. ಇಬ್ಬರಿಗೆ ಮೊನ್ನೆ ರಿಪೇರಿ ಮಾಡಿಕೊಟ್ಟೆ. ಮರುದಿನ ನನ್ನನ್ನೆ ಕಾದಿದ್ದು ಬಂದು ಎದ್ವಾತದ್ವ ಬೈದರು. "ನಿನ್ನ ರಿಪೇರಿಗೆ ಬೆಂಕಿ ಹಚ್ಚಿತು. ಗಡಿಯಾರ ಮಧ್ಯಾಹ್ನದ ಹನ್ನೆರಡಕ್ಕೆ....ರಾತ್ರಿ ಮೂರು ಘಂಟೆ ತೋರಸತ್ತೆ....ರೆಡಿಯೋ ನೋಡಿ, ಘಂಟೆ ಇಟ್ಟಿದ್ದೆವು ...ಹಾಗಾದರೂ ಸಂಜೆ ಐದಕ್ಕೆ ಮುಂಜಾನೆ ಐದು ಘಂಟೆ ತೋರಸತ್ತಲ್ಲಯ್ಯಾ " ಎಂದು ತಕರಾರು ಹಾಕಿದರು... ರೆಡಿಯೋ ಏನು ನೀವರೆ ರಾಯರೆ....ನಂಗೂ ಕೋಪ ಬಂತು. ನನ್ನ ಗಡಿಯಾರ ತೋರ್‍ಸ್ತಿದೇ ಸರಿಯಾದ ಘಂಟೆ ನಿಮ್ಮ ರೆಡಿಯೋನೆ ಹಿಂದೆ ಮುಂದೆ "ಯಾಕೆ ಹೋಗಿರ ಬಾರದು?....ಎಂದು ದಬಾಯಿಸಿದೆ...."

"ಹ್ಹ ಹ್ಹ ಹ್ಹ....ಚೆನ್ನಾಗಿ ಹೇಳಿದೆ...."

“ ಅಷ್ಟಲ್ಲದೆ....ಸುಮ್ಮನೆ ನಮ್ಮ ನಸೀಬು ಕಡಿಮೆ ಆಗಿ ಬೀದಿಗೆ ಬಂದೆ ವೂಂತ ಬೈದರೆ ಹೆಂಗೆ ಸ್ವಾಮಿ... ನಾನೂ ಒಂದು ಅಂಗಡೀಂತ ಇಟ್ರೆ ಇದ್ದದ್ದು ಇಲ್ಲದ್ದು ಎಲ್ಲಾ ಬದಲಾಯಿಸ್ದೇಂತ ಹೇಳಿಹರೆ ಬಿಲ್ಲುಕೊಟ್ಟು ಹೋಗ್ತಿರ....”

“ ಅದಿರ್ಲಿ ಮಹಾರಾಯ....ಈ ಗಡಿಯಾರ ನೋಡು” ಎಂದ ಕೂಡಲೆ— ತನ್ನ ಹಳೇ ಟ್ರಂಕು ತೆಗೆದ. ಅದೊಂದು ಹರಿದಮುರಿದ ಸತ್ತ ಗಡಿಯಾರಗಳ ಸಂತೆ. ಮಧ್ಯೆ ಒಂದೊಂದು ಸ್ಕ್ರೂಡ್ರೈವರ್ರು ಒಂದೊಂದು ಚಿಮುಟ ಸಿಕ್ಕಿ ಕೊಂಡಿದ್ದವು— ಅವುಗಳಿಂದಲೇ ನನ್ನ ಗಡಿಯಾರವನ್ನು ಬಿಚ್ಚಿ ಅಂಗಾಂಗಗಳನ್ನು ಬೇರ್ಪಡಿಸಿದ. ಮಧ್ಯೆ ಮಧ್ಯೆ ತ್ಸೊ ತ್ಸೊ ತ್ಸೂ....ಅಯ್ಯೋ ಪಾಪ ...ಅನ್ಯಾಯ ....ಎಂಬ ಶಬ್ದ ಅವನ ಬಾಯಿಂದ ಹೊರಬೀಳುತ್ತಿತ್ತು. ಕಡೆಗೆ....“ ಒಂದಲ್ಲ ಎರಡಲ್ಲ....ಬಹಳ ಅಂಗಗಳು ಜಖಂ ಆಗಿವೆ....ಎಲ್ಲಾ ಬದಲಾಯಿಸಿ ಹಾಕ ಬೇಕು....ಹನ್ನೆರಡು ರೂಪಾಯಿ ಮೂರಾಣೆ ಚಾರ್ಜಾಗತ್ತೆ....”ಎಂದ.

ಮೂರು ಕಾಸಿನ ಸೌತೆಕಾಯಿಗೆ ಮೂರಾಣೆ ಉಪ್ಪೆ ?

“ ಬೇಡ....ಹಾಗೇ ಜೋಡಿಸಿಬಿಡು ” ಎಂದೆ.

“ ಬಿಚ್ಚಿದ್ದಕ್ಕೆ ಒಂದೂಕಾಲು ರೂಪಾಯಿ ...ಮತ್ತೆ ಹಾಕೋದಕ್ಕೆ ಒಂದೂ ಮುಕ್ಕಾಲು ರೂಪಾಯಿ— ಒಟ್ಟು ಮೂರು ರೂಪಾಯಿ ಬಿಲ್ಲು....” ಎಂದು ಜೇಬಿ ನಿಂದ ಬಿಲ್ಲು ಬುಕ್ಕು ಪೆನ್ಸಿಲ್ಲು ತೆಗದ ಧೀರ.

ನನಗೊಂದೂ ತೋಚದಾಯಿತು. ಇವನನ್ಯಾತಕ್ಕೆ ಕರೆದೆ ಎಲ್ಲಾ ಬಿಟ್ಟು ಎಂದನಿಸಿತು.....

“ಹೋಗಲಿ ಗಡಿಯಾರಾನೆ ಮಾರಿಬಿಡ್ತೇನೆ ಎಷ್ಟಕ್ಕೆ ತೊಗೊತಿಯು” ಎಂದೆ.

“ ನನಗೆ ಬೇಡ ಸ್ವಾಮಿ....ತೊಗೊಂಡ್ರೂನು ಎರಡುವರೆಗೆ ತೊಗೋ ಬಹುದು....ಅದರ ಮೇಲೆ ನಾನು ಹತ್ತು ಖರ್ಚು ಮಾಡಬೇಕಾಗತ್ತೆ....” ಎಂದ. ನಾನು ಯೋಚಿಸಿದೆ. ಪಕ್ಕದಮನೆ ಮುದುಕಿ ಅಲಾರಂ ಇಟ್ಟಾಗ ಕೆಮ್ಮುತ್ತೆ. ಆರು ವರ್ಷ ಕೆಲಸಮಾಡಿದೆ ಗಡಿಯಾರ ಇನ್ನು ಯಾತಕ್ಕೆ. ಎರಡೂವರೆಗೆ ಮಾರಿ ಬಿಟ್ರೆ ಹುಡುಗರಿಗೆ ತಿಂಡಿ ಖರ್ಚಿಗಾದರೂ ಆಗತ್ತೆ ಎಂದು....” ಹಾಗೇ ಆಗಲಿ ನೀನೇ ತೊಕೊಪ್ಪ....” ಎಂದೆ.

ಅವನು ಕೂಡಲೆ ಬಿಚ್ಚಿದ ಗಡಿಯಾರದ ಭಾಗಗಳನ್ನೆಲ್ಲಾ ತನ್ನ ಪೆಟ್ಟಿಗೆಗೆ ತುಂಬಿ ಬಾಗಿಲು ಮುಚ್ಚಿ ಎದ್ದುನಿಂತ. ಕೊಡೆಕಡ್ಡಿ ಬಗಲಿಗೆ ಸಿಕ್ಕಿಸಿ “ ಕೊಡಿ ಮತ್ತೆ ನಾ ಹೋಗ್ತೀನಿ ” ಎಂದ.

“ ಅರೆ! ನೀನೇ ಎರಡುವರೆ ಕೊಡಬೇಕಲ್ಲಯ್ಯಾ.........ನಾ ನೇ ನು ಕೊಡೋದು....”

" ಬಿಚ್ಚಿದ್ದರ ಕೂಲಿ....ಒಂದೂಕಾಲು....ಮತ್ತೆ ನಾನು ಹಾಕ್ಕೊಬೇಕಾದರೆ ....ಅದರದು ಒಂದೂ ಮುಖ್ಕಾಲು....ನಿಮಗೆ ಕೊಡೋದು ಎರಡುವರೆ....ಮೂರ ರಲ್ಲಿ ಎರಡುವರೆ ಜಾತ ಇನ್ನು ಎಂಟಾಣೆ ನೀವೇ ಕೊಡಬೇಕಲ್ಲ...."

" ಹುಡುಗಾಟ ಮಾಡ್ತಿ ಏನಯ್ಯಾ....ನಮ್ಮ ಗಡಿಯಾರ ವಾಪಸ್ಸು ಕೊಟ್ಟು ಬಾಯಿಮುಚ್ಚಿಕೊಂಡು ಹೋಗು....ಪೋಲೀಸಿಗೆ ಕೊಟ್ಟೇನು...." ಎಂದು ರೇಗಿದೆ. ಅವನು ಪೆಟ್ಟಿಗೆ ತೆಗೆದು ಮುಂದೆ ಹರವಿ.... "ನಿಮ್ಮ ಗಡಿಯಾರದ ಸಾಮಾನು ಆರಿಸಿಕೊಳ್ಳಿ ..." ಎಂದ. ನಾನೇನು ಆರಿಸೋದು ? ನೀರಲ್ಲಿ ಬೆರತ ಹಾಲಾಗಿತ್ತು ನನ್ನ ಗಡಿಯಾರ.


" ನೀನೇ ಆರಿಸಿ ತೆಗೆದು ಮೊದಲಿನ ಹಾಗೆ ಮಾಡಿ ಮಡಗು ..." ಎಂದೆ,

" ಅಲ್ಲಿಗೂ ನೀವು ತೆಗೆದ ಮತ್ತು ವಾಪಸ್ಸು ಹಾಕಿದ ಕೂಲಿ ಕೊಡ ಬೇಕಾಗುತ್ತಲ್ಲಾ ನನಗೆ ನಿಮ್ಮ ಋಣಬೇಡ, ಮಾಡಿದ ಕೆಲಸಕ್ಕೆ ಕೂಲಿಬೇಡವೆ ? ....ಹೀಗೇ ಹಿಂದೊಬ್ಬರು...." ಎಂದು ಮತ್ತೆ ಪುರಾಣತೆಗೆದ. ತಲೆ ಚಿಟ್ಟು ಹಿಡಿದು ಹೋಗಿತ್ತು ನನಗೆ....

" ಹಾಳಾಗಿ ಹೋಗು ನಿನ್ನ ರಿಪೇರಿಗಿಷ್ಟು ಬೆಂಕಿಬಿತ್ತು...." ಎಂದೆ.

"ಸಲಾಂ, ಬರ್ತೇನೆ...." ಎಂದು ಪೆಟ್ಟಿಗೆ ಸಮೇತ ಹೊರಟೇಬಿಟ್ಟ. ನಾನು —ಕುರ್ಚಿಯಲ್ಲಿ ಕುಸಿದು ಕುಳಿತೆ.

... ದಾಶರಥಿ ದೀಕ್ಷಿತ್



ಅನ್ನಕ್ಕಾಗದೇ ಹೋದರೂ, ಅಂತ್ಯಕ್ಕಾಗುತ್ತೆ.

ಕರಡಿ—ಗಿಡಗ

ಒಂದು ಊರಲ್ಲಿ ಒಂದು ಪಾಠಶಾಲೆ ಇತ್ತು; ಹಸುಳೆ ಮಕ್ಕಳು ಎಂಬತ್ತು ಜನ ಅಲ್ಲಿ ಓದುತ್ತಿದ್ದರು. ಬಾಗಿಲಲ್ಲಿ ತೋರಣ. ಅಂಗಳದಲ್ಲಿ ಹೂವಿನ ತೋಟ, ಗೋಡೆ ಮೇಲೆಲ್ಲ ಪಟಗಳು, ಸದಾ ಕಿಲಕಿಲ ನಗು, ಸದಾ ಸತ್ಕಥಾ ಕಾಲಕ್ಷೇಪ. ನಂದಗೋಕುಲ.

ಆ ಪಾಠಶಾಲೆಯಲ್ಲಿ ಎರಡು ತರಗತಿಗಳು; ನಡುವೆ ಬಿದರಿನ ತಟ್ಟಿ. ಆ ತಟ್ಟಿಯ ಮೇಲೆ, ಸತ್ಯ, ಅಹಿಂಸೆ, ದಯೆ, ಎಂಬ ಮಾತುಗಳನ್ನು ಅಂದವಾಗಿ ಬರೆದು ಅಂಟಿಸಿದ್ದರು.

ಅಲ್ಲಿಗೆ ಹೊಸದಾಗಿ, ದೂರದ ಷಹರಿಂದ, ಇಬ್ಬರು ನುರಿತ ಉಪಾಧ್ಯಾಯರುಗಳು ನೇಮಕವಾಗಿ ಬಂದರು, ನಾಲ್ಕು ವರ್ಷಗಳ ಹಿಂದೆ, ಇಬ್ಬರೂ ಅಪ್ಪಟ ಧಾಂಡಿಗರು. ಮೂರ್ಖರು. ಅಲ್ಲದೆ, ಒಬ್ಬರನ್ನ ಕಂಡರೆ, ಒಬ್ಬರಿಗಾಗದು. ಅವನು ಅಯೋಗ್ಯ ಮುಟ್ಠಾಳ ಶುಂಠಕಾಯಿ ಅಂತ ಇವನು ದೂರಿದ; ಇವನು ಕಳ್ಳ ಕುಹಕಿ ಚಂಡಾಲ ಅಂತ ಅವನು ಬೈದ. ಅವನ ಪಾಠ ಹುಡುಗರ ಕಿವಿಗೆ ಬೀಳಬಾರದು ಅಂತ ಇವನು ಕಂಠಪೂರ್ತಿ ಕೂಗಿದ; ಇವನ ಪಾಠ ಕೇಳಿಸದೆ ಇರುವಂತೆ ಅವನು ಸಿಂಹ ಗರ್ಜನೆ ಮಾಡಿದ.

ಇವರ ದ್ವೇಷ ಹುಡುಗರಿಗೂ ಹಚ್ಚಿತು. ಶಾಲೆಯ ಸಮರಸಭಾವನೆ ಇವರ ದೆಸೆಯಿಂದ ಹಾಳಾಯಿತು; ಹಾಲಾಹಲ ಉಕ್ಕಿತು. ಮೇಷ್ಟ್ರರ ಮತ್ಸರಕ್ಕೆ ಶಾಲೆ ರಣರಂಗವಾಯಿತು. ಹುಡುಗರೇ ಭಟರಾದರು. ಒಬ್ಬೊಬ್ಬರಿಗೂ ೪೦, ೪೦ ಜನ ಪೈಕಿಗಳು ಬೆಂಬಲನೀಡಿದರು; ಕಂಡ ಕಂಡ ಕಡೆಯಲ್ಲಿ ಕದನ ಮೊದಲಾಯಿತು. ಕಲ್ಲು ದೊಣ್ಣೆಗಳನ್ನು ಶೇಖರಿಸಿ ಬೆಂಚುಗಳ ಕೆಳಗಡೆ ಅವಿತಿಟ್ಟರು. ಉಗುರು ಬೆಳೆಸಿದರು; ಹಲ್ಲುಗಳನ್ನು ಹರಿತ ಮಾಡಿಕೊಂಡರು; ಬೈಗಳನ್ನು ಉರುಹೊಡೆದರು; ಸಗಣಿ ಶೇಖರಿಸಿದರು. ಬಿದಿರು ತಟ್ಟಿಯ ಕೆಳಗಿಂದ ಕೈ ನೀಡಿ ಕಾಲೆಳೆದು ಟಾಂಗ್ ಕೊಟ್ಟು ಆಚೆ ತರಗತಿಯವರನ್ನು ಬೀಳಿಸಿ ನಕ್ಕರು.

ಇಬ್ಬರು ಮಾಸ್ತರುಗಳೂ ಹುಡುಗರನ್ನು ಹೊಡೆದಾಟಕ್ಕೆ ಹುರಿ ದುಂಬಿಸಿದರು. ಅವರಿಗೆ ಬುದ್ಧಿ ಹೇಳಿ ಪರಿಸ್ಥಿತಿಯನ್ನು ಶಾಂತಪಡಿಸಲು ಊರಿನ ಪ್ರಮು

ಖರು ಯಾರೂ ಪ್ರಯತ್ನಿಸಲಿಲ್ಲ. ಪಂಡಿತರೊಬ್ಬರು ಮಾತ್ರ ಕೊಂಚ ಶ್ರಮಿಸಿದರು; ಆದರೆ, ಅವರು ಬಡವರು, ನಿಷ್ಕರು, ಹಳೇ ಮನೆತನದವರು, ಶಾಲು ಹೊದ್ದವರು. ಅವರ ಮಾತಿಗೆಯಾರು ಬೆಲೆ ಕೊಡುತ್ತಾರೆ?

ಮಸಲತ್ತು ವಿಪರೀತಕ್ಕಿಟ್ಟುಕೊಂಡಿತು. ಬೈಗಳ ಸುರಿಮಳೆಯಲ್ಲಿ ತಾತಮುತ್ತಾತಂದಿರ ಮಾನಕೂಡ ಕರಗಿತು. ಇಬ್ಬರು ಉಪಾಧ್ಯಾಯರೂ ಅವರ ತರಗತಿಯ ತಂಡವೂ ಹುಚ್ಚರಂತಾದರು; ಜ್ಞಾನ ಜಾರಿತು; ಕಣ್ಣಿದ್ದೂ ಕುರುಡು ಬಡಿಯಿತು. ಬಾಲಕರೆಲ್ಲರೂ ಬಾಲವಿಲ್ಲದ ಕಪಿಗಳಂತೆ, ಪರಸ್ಪರ ಕಣ್ಣು ಕೀಳಲು ಬುರುಡೆ ಒಡೆಯಲು ಹಲ್ಲು ಮುರಿಯಲು ಸಿದ್ಧರಾದರು.

ಕಾವು ಏರಿ. ದ್ವೇಷ ಹಚ್ಚಿ, ಎರಡು ಪಕ್ಷದವರೂ ಯುದ್ಧಕ್ಕೆ ಸಿದ್ಧರಾದರು. ಮೇಷ್ಟರುಗಳು ತಮ್ಮ ಸಹಾಯಕ್ಕಿದಾರಲ್ಲಾ ಎಂಬುದೇ ಹುಡುಗರಿಗೆ ಧೈರ್ಯ ಒಂದು ದಿನ ಬಿದಿರುತಟ್ಟಿಯ ಆಚೆಯಿಂದ ಕಲ್ಲು ಸಗಣಿ ಸುರಿ ಮಳೆ ಪ್ರಾರಂಭವಾಯಿತು, ಮೇಷ್ಟರುಗಳಿಬ್ಬರೂ ನುಗ್ಗಿರಿ, ಹೊಡೆಯಿರಿ, ಕಾಲು ಮುರಿಯಿರಿ, ಎಂದು ಕೂಗಿ ಉರಿ ತುಂಬಿಸಿದರು. ಗೋಡೆಗಳಲ್ಲಿದ್ದ ಪಟಗಳನ್ನೂ ಅತ್ತಿತ್ತ ಎಸೆದರು. ಅರಿಯದ ಹಸುಳೆಗಳು ಹಾವು ಚೇಳುಗಳನ್ನು ಹರಿಸಿದರು. ಚಟಾಕಿ ಚಿನಕುರುಳಿಗಳನ್ನು ಪ್ರಯೋಗಿಸಿದರು. ಹಲವರು ಒನಕೆ ಪಿಕಾಸಿಗಳನ್ನೂ ತಿರುಗಿಸಿ ಮುನ್ನುಗ್ಗಿದರು.

ಆ ದಿನದ ಹೊಡೆದಾಟದ ಮಧ್ಯೆ ಯಾವನೋ ಒಬ್ಬ ಮೇಷ್ಟರು, "ಲ್ರೋ! ಬೆಂಕಿ ಹಚ್ಚಿರೋ ಬಿದಿರು ತಟ್ಟಿಗೆ" ಎಂದು ಕೂಗಿದ, ದ್ವೇಷದ ಅಮಲಿನಲ್ಲಿ. ಹಸುಗೂಸೊಂದು ಬೆಂಕಿಕಡ್ಡಿ ಗೀಚಿ ಹಚ್ಚೇಬಿಟ್ಟಿತು.

ಶಾಲೆಗೆ ಬೆಂಕಿ ಬಿತ್ತು.

ಧಾಂಡಿಗರಿಬ್ಬರೂ ಹೊರಕ್ಕೆ ಹಾರಿದರು. ಮಕ್ಕಳ ಪೈಕಿ ಒಬ್ಬನೂ ಉಳಿಯಲಿಲ್ಲ. "ನಮ್ಮಲ್ಲೇನೂ ತಪ್ಪಿಲ್ಲ; ನಾವು ಸುಮ್ಮನೆ ನಮ್ಮ ಪಾಡಿಗೆ ಪಾಠ ಹೇಳುತ್ತಿದ್ದೆವು. ಹುಡುಗರು ಕಲಹ ಪ್ರಿಯರು, ಶುದ್ಧ ಕಾಡು ಮೃಗಗಳು" ಎಂದು ಉಪಾಧ್ಯಾಯರು ವಾದಿಸಿ ಪಾರಾದರು.

ಈಗ ಅವರಿಬ್ಬರನ್ನೂ ಪಡುವಲ ಕಡೆ ಯಾವುದೋ ಒಂದು ಊರಿಗೆ ವರ್ಗಮಾಡಿದಾರೆ. ಅಲ್ಲಿ, ಯಾವಾಗ ಬೆಂಕಿ ಹತ್ತುತ್ತೋ, ನೋಡಬೇಕು.

—ನಾ. ಕ.

—o—

ಹೀರೋ

ಕಟ್ಟಕಡೆಯ ಸೀಗರೇಟು
ನನ್ನ ಕೈಯಲಿ!

ಅದರ ಸಂಗಡಿದ್ದುದೆಲ್ಲ
ಆಗಲೇ ಹೊಗೆ!

ಕಿಸೆಯು ಬರಿದು. ಕಾಸೆ ಇಲ್ಲ
ಬಂತು ರೋದನ;

ಇಕೊ, ಕಡ್ಡಿ ಗೀಚಿ ನಾನು
ಬಾಯಿ ಮೋದನ.

ಆಹ, ಹಚ್ಚಿ ಸೊಗವು ಉಕ್ಕಿ
ಮುದದ ಮೆರುಗಿದು!

ಅಕೊ, ಬೂದಿ ಗಾಳಿಪಾಲು
ಮುಗಿಯೆ ನಿಮಿಷದಿ—

ನಲಿವುದಿಲ್ಲ ನಿಲುವುದಿಲ್ಲ
ಉಂಟು ಮಾರಿಯು!

ಕಡೆಯ ಗುಟುಕು ತನಕ ಹೀರು
ಒದುವೆ ದಾರಿಯು!

—ಗಂಗಾಧರ.

—o—

ಅಪ್ಪನಿಗೆ ಆಶೀರ್ವಾದ

ನಮ್ಮಪ್ಪನಿಗೆ ನಮ್ಮ ಜಾತಿಯವರು ಎಂದರೆ ವಿಪರೀತ ಅಭಿಮಾನ, ಮಮತೆ. ಅವನು ನಮ್ಮ ಜಾತಿಯವರ ಪೇಪರನ್ನು ಮಾತ್ರ ಓದುತ್ತಾನೆ; ನಮ್ಮ ಜಾತಿಯವರ ಕೂಡ ಮಾತ್ರ ಇಸ್ಪೀಟು ಆಡುತ್ತಾನೆ. ನಮ್ಮ ಜಾತಿಯವರನ್ನು ಸದಾ ಹೊಗಳುತ್ತಿರುತ್ತಾನೆ; ಇತರೇಯವರನ್ನು ದಿನವೂ ದೂಷಿಸುತ್ತಾನೆ; ದೊಡ್ಡ ದೊಡ್ಡವರು, ಯಾರು ಯಾರು, ಯಾವ ಯಾವ ಜಾತಿ ಎಂಬ ವಿವರವನ್ನೆಲ್ಲಾ ಅವನು ಪತ್ತೆ ಮಾಡಿದ್ದಾನೆ. ಪುರಸತ್ತು ಸಿಕ್ಕಿದಾಗಲೆಲ್ಲ ಇತರೇ ಜಾತಿಯವರನ್ನು ಬೈದು ಪತ್ರಿಕೆಗಳಿಗೆ ಬರೆಯುತ್ತಾನೆ. ಅವನ ಕೋಣೆಯಲ್ಲಿ ದಿನವೂ ಸಭೆ ಸೇರುತ್ತೆ. ಪಿತೂರಿ ನಡೆಯುತ್ತೆ. ಆದ್ದರಿಂದ ನನಗೂ ನನ್ನ ತಮ್ಮನಿಗೂ ತುಂಬಾ ಅನುಕೂಲವಾಗಿದೆ.

ನಾವು ಸ್ಕೂಲಿಗೆ ಹೋಗುತ್ತೇವೆ. ಆದರೆ, ನಮಗೆ ಓದಬೇಕಾದ ತಂಟೆ ತಾಪತ್ರಯವೇ ಇಲ್ಲ. ಪರೀಕ್ಷೆಯಾಗುತ್ತೆ, ನಾವು ಫೆಯಿಲಾಗುತ್ತೇವೆ. ಆದರೆ, ಅಪ್ಪನಿಗೆ ನಾವು ಏನು ಹೇಳುತ್ತೇವೆ ಗೊತ್ತೆ? "ನಾವೇನು ಮಾಡೋದಪ್ಪ? ಮೇಷ್ಟರು ನಮ್ಮ ಜಾತಿಯವರಲ್ಲ. ಹೆಡ್ಮೇಷ್ಟರಿಗೆ ನಮ್ಮ ಜಾತಿಯವರನ್ನು ಕಂಡರಾಗದು. ನಾವು ಎಷ್ಟೇ ಚೆನ್ನಾಗಿ ಉತ್ತರ ಬರೆದರೂ, ಅವರು ನಮಗೆ ಸೊನ್ನೇನೆ ಸುತ್ತುತ್ತಾರೆ" ಅಂತೇವೆ. ಸರಿ. ಅಪ್ಪ ಬೆಂಕಿ ಕಾರುತ್ತಾನೆ. ವಾಕಿಂಗ್ ಸ್ಟಿಕ್ ತೆಗೆದುಕೊಂಡು ಹೊರಗೆ ಹೊರಡುತ್ತಾನೆ. ಒಂದೆರಡು ಗಂಟೆ ಬಿಟ್ಟುಕೊಂಡು ಮನೆಗೆ ಬರುತ್ತಾನೆ. "ಲ್ರೋ! ನೀವಿಬ್ಬರೂ ಪಾಸ್!" ಅಂತಾನೆ.

ಸ್ಕೂಲ್ ಡೇ ದಿನ ನಮ್ಮ ಸ್ಕೂಲಲ್ಲೂ ಪೈಪೋಟಿಗಳನ್ನಿರಿಸಿ, ಪ್ರೈಸುಗಳು ಕೊಡುತ್ತಾರೆ. ಪ್ರಬಂಧ ಸ್ಪರ್ಧೆ, ಕಂಠಪಾಠ ಸ್ಪರ್ಧೆ, ಆಟ ಓಟದ ಸ್ಪರ್ಧೆ, ಇತ್ಯಾದಿ ನಡೆಯುತ್ತವೆ. ನಿಮಗೇನೂ ಪ್ರೈಸ್ ಬರಲಿಲ್ಲವೇನೋ, ಅಂತ ಅಪ್ಪ ಕೇಳುತ್ತಾನೆ. ನಾವು ಮುಖ ಸಿಂಡರಿಸಿಕೊಂಡು ಪ್ರಾರಂಭ ಮಾಡುತ್ತೇವೆ ನಮ್ಮ ಅಹವಾಲನ್ನ : "ನೋಡಪ್ಪ! ಅಲ್ಲಿ ಜಡ್ಜಾಗಿದ್ದವರು ಬೇರೆ ಜಾತಿಯವರು, ನಮ್ಮವರೊಬ್ಬರೂ ಇರಲಿಲ್ಲ" ಅಂತೇವೆ. ಸರಿ. ಅಪ್ಪ ವಿಷ ಕಾರುತ್ತಾನೆ; ಹೋಗಿ ಆರ್ಭಟ ಮಾಡುತ್ತಾನೆ. ಓಟದಲ್ಲಿ ನಾಲ್ಕನೆಯವನಾಗಿ ಬಂದ ನನಗೇನೇ

ಫಸ್ಟ್ ಪ್ರೈಸ್ ಸಿಗುತ್ತೆ; ಕಂಠಪಾಠ ಕೊಂಚವೂ ಮಾಡದ ನನ್ನ ತಮ್ಮನಿಗೆ ಮೊದಲನೆಯ ಬಹುಮಾನ, ಮೆಡ್ಲು, ಗಿಟ್ಟಿಸಿಕೊಡುತ್ತಾನೆ. ಅಪ್ಪ ಇರುವ ತನಕ ನಮಗೇನು ಭಯ?

ಮೊನ್ನೆ ನನ್ನ ತಮ್ಮನ ಸೈಕಲ್ ಡ್ಯಾಷಾಗಿ ಚಕ್ರಗಳೆರಡೂ ಬಗ್ಗಿ ಕಡ್ಡಿಗಳು ನಾಲ್ಕಾರು ಮುರಿದು ಹೋದುವು—ಸಿನಿಮಾ ನೋಟೀಸ್ ನೋಡುತ್ತಾ ತುಂಬಿದ ರಸ್ತೇಲಿ ಅವನು ಸವಾರಿ ಮಾಡುತ್ತಿದ್ದಾಗ, ಸ್ನೇಹಿತನನ್ನೂ ಕೂರಿಸಿಕೊಂಡು ಮನೆಗೆ ಬರುತ್ತಲೂ ಅಪ್ಪ ಅವನನ್ನ ಹೊಡೆಯೋಕೆ ಬಂದ. ಆದರೆ, ಅವನು, "ಇದೇನಣ್ಣಾ ಇದು? ನನ್ನ ಸೈಕಲ್ ಮೇಲೆ ಬಂದು ಬಿದ್ದನಲ್ಲಾ ಆ ಇನ್ನೊಬ್ಬ ಸೈಕಲಿನವ, ಅವನ ಜಾತಿ ಯಾವುದು ಅಂತ ಕೇಳಿದ ಮೇಲಲ್ಲವೇ ನೀನು ನನ್ನ ಮೇಲೆ ರೇಗಬೇಕಾದದ್ದು? ಅವನ ಜಾತಿ ಬೇರೆ, ನಮ್ಮ ಜಾತಿ ಬೇರೆ; ಅಂದ ಮೇಲೆ, ಅವನದೇ ಅಲ್ಲವೆ ತಪ್ಪು?" ಎಂದ. ಅಪ್ಪನಿಗೆ ಖುಷಿಯಾಗಿ ಹೋಯಿತು. "ಭಲಾ ಮಗನೇ" ಎನ್ನುತ್ತ, ಅವನು ನನ್ನ ತಮ್ಮನನ್ನು ಬಾಚಿ ತಬ್ಬಿ ಮುತ್ತಿಟ್ಟ.

ನಮ್ಮ ಜಾತಿಯವರ ಅಂಗಡಿಯಿಂದಲೇ ಮನೆಗೆ ಸಾಮಾನು ತರಬೇಕು ಅಂತ ಅಪ್ಪ ನಮಗೆಲ್ಲ ಹೇಳಿದ್ದ. ನಾನೂ ನನ್ನ ತಮ್ಮನೂ ಇದನ್ನು ನಮ್ಮ ಅನುಕೂಲಕ್ಕೆ ಉಪಯೋಗಿಸಿಕೊಂಡೆವು. ಎಂಟಾಣೆ ಪದಾರ್ಥಕ್ಕೆ ಹನ್ನೆರಡಾಣೆ ವಸೂಲು ಮಾಡುವೆವು ನಾವು ಮನೆಯಿಂದ, ಸುಳ್ಳು ಹೊಡೆದು. ಯಾಕೊ್ರೀ ಇಷ್ಟು ಬೆಲೆ, ಎಲ್ಲೋ ಮೋಸ ಹೋಗಿರಬೇಕು ನೀವು, ಶುದ್ಧ ದಡ್ಡರು, ಅಂತ ಅಪ್ಪ ಬೈದರೆ, "ನಮ್ಮ ಜಾತಿಯವರ ಅಂಗಡೀಲಿ ಹನ್ನೆರಡಾಣೆ ಹೇಳಿದರಪ್ಪ! ನಮಗೇನು ಗೊತ್ತು? ಬೇರೊಬ್ಬರ ಅಂಗಡಿಯೊಳಕ್ಕೆ ನಾವು ಕಾಲಿಡುವುದೇ ಇಲ್ಲ, ಬೆಲೆ ವಿಚಾರಿಸುವುದಕ್ಕೆ; ನಾವು ನಿನ್ನ ಮಕ್ಕಳಲ್ಲವೆ, ಅಪ್ಪ?" ಎನ್ನುವೆವು.

ಆ ಮಾತು ಕೇಳುತ್ತಲೂ ಅಪ್ಪ ಹಿಗ್ಗಿ ಹೀರೇಕಾಯಿ ಆಗುವನು. ತಲಾ ಎರಡೆರಡಾಣೆ ಇನಾಮು ಕೊಡುವನು. ಸರಿ, ನಮಗೆ ಆಗಲೇ ಲಾಭ ಬಂದಿದ್ದ ನಾಲ್ಕಾಣೆ ಜೊತೆಗೆ ಇದೂ ಒಂದು ಲಾಭ.

ಯಾರಾದರೂ ನಮ್ಮನ್ನು ಗದರಿಸಿದರೆ, ಅವರ ಜಾತಿ ವಿಚಾರಿಸಿ ಅಪ್ಪನಿಗೆ ಹೇಳಿದರಾಯಿತು, ನಮಗೆ ಕಾಟ ತಪ್ಪುತ್ತದೆ, ಅಂತ ಅಪ್ಪ ಅಭಯ ಕೊಟ್ಟಿದ್ದಾನೆ........ನೋಡಬೇಕು, ಅಷ್ಟರಲ್ಲೇ. ಅಂತೂ, ಅಪ್ಪ ಬದುಕಿರುವ ತನಕ ನಾವು ಮುನಸ್ಸೀ ಇರಬಹುದು. ದೇವರು ಅಪ್ಪನಿಗೆ ನೂರು ವರ್ಷ ಆಯುಸ್ಸು ಕೊಡಲಿ. ಅವನಿಗೆ ಈಗ ಮೂವತ್ತೆಂಟು.

—ಟಿ. ಎಸ್. ಪಿ.

— — o — —

ಗೌರೀ—ಗಣಪತಿ ಸಂವಾದ

ತಾಯೆ ಹಸಿವು
ತಾರೇ ಹೋಳಿಗೆ
ಚೂರನಾದರೆನಗೆ !

ಚಿನ್ನ ಏನಿದು ?
ನಿನ್ನೆ ಗಣಪತಿ ಹಬ್ಬ
ಎನ್ನ ಬೇಡುವೆ ತಿನ್ನಲು !

ಬೇಡದಿನ್ನೇನು ?
ನೀಡಿದವರಾರೆನಗೆ
ಕಡುಬನೀಪೇಳಮ್ಮ !

ಅಕ್ಷತೆಗೇ ಅರವಟ್ಟಿ
ಅಕ್ಕಿ ಎಲ್ಲಿಹುದು ಕಡುಬಿಗೆ ?
ದುರ್ಭಿಕ್ಷವಾಯಿತೆಮ್ಮಪಾಡು !

ಹಸಿವೆ ತಾಯಿಾ ಹಸಿವು
ಹಸನು ತಿನಸಬೇಡೆನೇ !
ಹಸಿಯು ದಿನಸೆ ನೀಡೆ ಅಮ್ಮಾ !

ಮಗನೆ ನೀಡಲೇನಿಹುದೋ ?
ಬಾಗಿನದೊಳಿದ್ದ ಬೇಳೆಗಳೊಳು
ಸಾಗದು ಒಪ್ಪೊತ್ತಿನ ಒಗ್ಗರಣೆ !

ಬೆನ್ನ ಮುಟ್ಟಿಹುದೆನ್ನ ಹೊಟ್ಟೆ !
ಎನ್ನ ಪೂಜಿಸಿದ ರೇಷನಧಿಕಾರಿ
ಮೇಜಮಾಳ್ಪನು ತನ್ನ ಹೊಟ್ಟೆ ಮೇಲೆ !

ಕಂದ ಇನ್ನೇನ ಕಾಣ್ವೆವೋ !
ಮಣ್ಣು ಬಣ್ಣಕ್ಕು ಬರಲಿಹುದೊ ರೇಷನ್ನು ?
ಆಗೆಮ್ಮ ಪೂಜಿಪರಾರು ಪೇಳು !

—ಟಿ. ಸುನಂದಮ್ಮ.

ಕೈ ಕಚ್ಚಿದರೂ—ಬಾಯ್ ಮೊಸರೇ!

—— –

"ಉದಯವಾಗಲಿ ಚೆಲುವ ಕನ್ನಡನಾಡು" ಎಂದು ಆಗತಾನೇ ರೇಡಿಯೋದಲ್ಲಿ ಹಾಡುತ್ತಿದ್ದರು. ಯಾರೋ ಬಾಗಿಲ ಹೊರಗೆ "ಸಾರ್" ಅಂದಂತಾಯಿತು. ಹೊರಗೆ ಹೋಗಿ ನೋಡಿದರೆ, ಇಬ್ಬರು ಮಧ್ಯವಯಸ್ಸಿನ ಹೆಂಗಸರು, ಹಣವಂತರ ಮನೆ ಹೆಂಗಸರು, ನಿಂತಿದ್ದಾರೆ. ನಮ್ಮ ಮನೆಗೆ ಯಾರು ಬರೋದೂ ಅಪರೂಪ. ಹೆಂಗಸರಂತೂ ಇನ್ನೂ ಅಪರೂಪ. ಇದೇನು ಸೋಜಿಗ ಎಂದಂದುಕೊಂಡು "ಏನಮ್ಮಾ" ಯಾಕೆ ಬಂದಿರಿ? ಮಹಿಳಾ ಸಮಾಜ, ವನಿತಾ ಸದನ, ಇತ್ಯಾದಿ ಆದರೆ ನಮ್ಮನೆಯಲ್ಲಿ ಹೆಂಗಸರಿಲ್ಲ ಎಂದು ವಿಷಾದದಿಂದ ತಿಳಿಸಬೇಕಾಗಿದೆ ಎಂದೆ. ಅದಕ್ಕವರು "ಹೆಂಗಸರಿಲ್ಲದಿದ್ದರೆ ಪರವಾಗಿಲ್ಲ, ನಿಮ್ಮನ್ನೇ ನೋಡುಕ್ಕೆ ಬಂದಿದ್ದೇವೆ. ನಾವು 'ಅಬಲಾಸದನ'ದ ಕಾರ್ಯದರ್ಶಿಗಳು. ಆ ಸದನಕ್ಕಾಗಿ ಒಂದು ಲಾಟರಿ ಏರ್ಪಡಿಸಿದ್ದೇವೆ. ನೀವು ಒಂದು ಲಾಟರಿ ಪುಸ್ತಕ ಮಾರಬೇಕು. ನಿಮಗೆಷ್ಟೋ ಜನ ಸ್ನೇಹಿತರಿದ್ದಾರೆ. ಒಬ್ಬೊಬ್ಬರಿಗೆ ಒಂದೊಂದು ಟಿಕೇಟು ಮಾರಿದರೆ, ಪುಸ್ತಕ ಖಾಲಿಯಾಗುತ್ತೆ. ನಿಮಗೂ ಎರಡು ಟಿಕೇಟು ಪುಕ್ಕಟೆ ಸಿಗುತ್ತೆ" ಅಂದರು.

ಇದೇನು ಮಹಾ ಕೆಲಸ ಅಂತ, ಅವರ ಹತ್ತಿರ ಒಂದು ಪುಸ್ತಕ ಕೊಂಡೆ.

ಸಾಯಂಕಾಲ ಸಾಹುಕಾರ ಶೇಷಣ್ಣ ಸಿಕ್ಕ. ಅವನನ್ನು ಪುಸಲಾಯಿಸಿ ಕಾಫಿ ಕೊಡಿಸಿದೆ. ಅವನ, ಅವಳ, ಆದರ, ಆರೋಗ್ಯವನ್ನೆಲ್ಲಾ ವಿಚಾರಿಸಿದೆ. ಕಡೆಗೆ ಲಾಟರಿ ಟಿಕೆಟ್ ಮಾತೆತ್ತಿದೆ. ಅಹನು ಕೇಳಿದ, ಟಿಕೆಟ್ ಬೆಲೆ ಎಷ್ಟು ಎಂದು. ಒಂದು ರೂಪಾಯಿ ಅಂದೆ. "ಆಗಲಪ್ಪಾ ಇಷ್ಟು ಕೇಳುತ್ತಾ ಇದಿ ನೀನು ಒಳ್ಳೇ ಕೆಲಸಕ್ಕೆ ಕೇಳ್ತಾ ಇದಿ. ಒಂದು ಟಿಕೇಟ್ ನನಗೆ ಕೊಡು. ಆದರೆ, ನನ್ನ ಟಿಕೇಟ್ ಒಂದು ನೀನು ಕೊಳ್ಳಬೇಕು ಎಂದ. ಮೊದಲ ಗಿರಾಕಿ ಕೆಟ್ಟುಹೋದರೆ ಶಕುನವಲ್ಲಾ ಎಂದು ಒಪ್ಪಿದೆ. 'ಹನುಮಂತರಾಯ ವಾಚನಾಲಯ'ದ ನಿಧಿಗಾಗಿ ಏರ್ಪಡಿಸಿದ್ದ ಒಂದು ಟಿಕೇಟನ್ನು ಅವನು ಕೊಟ್ಟು, ಮಿಕ್ಕ ನಾಲ್ಕು ರೂಪಾಯಿ ಕೊಡು ಎಂದು ಹೇಳಿದ.

ಹನುಮಂತರಾಯನ ಮುಖ ನೋಡಿಕೊಂಡು ನಾಲ್ಕು ರೂಪಾಯಿ ತೆತ್ತೆ. ಅವನನ್ನು ಬೀಳ್ಕೊಟ್ಟು ಹೊರಟೆ.

ನಂತರ ಜೂಜಿನ ರಂಗಪ್ಪ ಸಿಕ್ಕಿದ. ಹೋದಸಾರಿ ಜೂಜಿನಲ್ಲಿ ಅವ ಇಪ್ಪತ್ತು ಸಾವಿರ ಮಾಡಿದ್ದ ಎಂದು ಪ್ರತೀತಿ. ಅವನ ಕೈಹಿಡಿದು, ಕೈಕುಲುಕಿ, ಟಿಕೇಟ್ ತೆಗೋ ಎಂದೆ. "ಯಾವ ಟಿಕೆಟ್ಟೊ ಪೂನಾದೆ" ಎಂದ. ಅದೇ ಅವನ ಮನಸ್ಸಿಗೆ ಮೊದಲು ಬಂದಿದ್ದು. "ಅಲ್ಲಾ ಕಣಯ್ಯಾ! ಇದು 'ಅಬಲಾ ಸದನ'ದ ಸಹಾಯ" ಎಂದೆ. "ರಮಣಿಯರನ್ನು ಮತ್ತು-ರೇಸುಗಳನ್ನು ನಂಬ ಬೇಡ ತಮ್ಮಾ! ನಂಬ ಬೇಡ" ಎಂದು ಹಾಡಲು ಉಪಕ್ರಮಿಸಿದ. "ಹಾಗನ್ನ ಬೇಡ ಅಣ್ಣಾ! ನೀನು ನನ್ನ ಕೈಬಿಡಬೇಡ ಎಂದು ಅಂಗಲಾಚಿದೆ. "ನಿನ್ನ ಗೋಳು ನೋಡಲಾರೆ ತಮ್ಮಾ! ಆಗಲೀ ಐದು ಟಿಕೇಟು ತೆಗೆದುಕೊಳ್ಳುತ್ತೇನೆ. ಆದರೆ ಅದಕ್ಕೆ ನಾನು ಹಣ ಕೊಡಬೇಕೋ ನೀನೋ! ಎಂದು ವ್ಯವಸ್ಥೆ ಮಾಡಲು ಒಂದು ರೂಪಾಯಿ ಛಂಗಿಸೋಣ. ಅಕ್ಷರ ಬಿದ್ದರೆ ನೀನು, ತಲೆ ಬಿದ್ದರೆ ನಾನು" ಎಂದ.

"ಅದೃಷ್ಟ ನೋಡೇಬಿಡ್ತೇನೆ, ಐದು ಟಿಕೇಟ್ ಒಟ್ಟಿಗೆ ಹೋದರೆ ಸೂತಕ ಕಡಿಮೆ ಆದಹಾಗೆ ಅಲ್ಲವೇ ?" ಎಂದು ಒಪ್ಪಿದೆ.

ರೂಪಾಯಿ ಛಂಗಿಸಿದ. ಅಕ್ಷರ ಮೇಲಾಯ್ತು. ತಲೆ ಕೆಳಗಾಯ್ತು. ಐದು ಟಿಕೇಟ್ ಅವನಿಗೆ ಮುಫ್ತಾಕೊಟ್ಟೆ. ಮುಂದೆ ನಡೆದೆ.

ಬೆಣ್ಣೆ ಶಾಮಣ್ಣ ಸಿಕ್ಕಿದ. 'ಅಬಲಾ ಸದನ'ದ ವಿಷಯ ಅವನಿಗೆ ಅರು ಹಿದೆ. ಅವರ ಕಷ್ಟ ನಿಷ್ಠುರಗಳನ್ನು ಅವನಿಗೆ ತಿಳಿಸಿದೆ. ಅವನ ಮನಸ್ಸು ಕರಗುವಂತೆ ಮಾತನ್ನು ಹೆಣೆದೆ. ಅಳೋದೊಂದು ಬಾಕಿ, ಆ ಸ್ಥಿತಿಗೆ ನಾನೂ ಬಂದಿದ್ದೆ. ಅವನೂ ಬಂದಿದ್ದ.

"ಆಗಲೀ ಕಣಯ್ಯಾ! ಹತ್ತು ಟಿಕೇಟ್ ನನಗೆ ಕೊಡು. ಆದರೆ ನಾನು ರೂಪಾಯಿ ಕೊಡುಲ್ಲ. ಅದರ ಬದಲು ನಿನ್ನ ಮನೇಗೆ ಒಂದು ಧಡಿಯ ಫಸ್ಟ್ ರೇಟ್ ಸರ್ಕಾರದ ಆಫೀಸರುಗಳು ಉಪಯೋಗಿಸುವ ಬೆಣ್ಣೆ ಕಳಿಸುತ್ತೇನೆ" ಎಂದ.

ನನಗೆ ಆಗಲೇ ಅನುಮಾನ. ಸರ್ಕಾರೀ ಆಫೀಸರುಗಳು ಉಪಯೋ ಗಿಸೋ ಬೆಣ್ಣೆ ಹಚ್ಚುಕ್ಕೆ ಲಾಯಖಾದ್ದೇ ವಿನಹಾ ತಿನ್ನುಕ್ಕಲ್ಲ. ಅದನ್ನು ತೆಗೆದುಕೊಂಡು ನಾನೇನು ಮಾಡಲಿ? ನನಗೇನೂ ಸರ್ಕಾರೀ ನೌಕರಿ ಇಲ್ಲ ಪಲ್ಲ! ಎಂದು ತೋಚದೆ ಇರಲಿಲ್ಲ. ಆದರೆ, ವಿಧಿಯು ಮುಂದೆ ನಂದೇನು ನೆಣಸಾಟ! ಇರಲೀ ಈ ಬೆಣ್ಣೇನೂ ಮುಂದಕ್ಕೆ ಉಪಯೋಗ! ಎಂದು ಒಪ್ಪಿದೆ. ಅವನಿಗೆ ಹತ್ತು ಟಿಕೇಟ್ ಹರಿದುಕೊಟ್ಟೆ.

ಅಷ್ಟು ಹೊತ್ತಿಗೆ ಬೇಜಾರಾಗಿತ್ತು. ಮಿಕ್ಕ ಟಿಕೇಟ್ ನನಗೇ ಇರಲಿ ಎಂದುಕೊಂಡೆ. ಹೋಟಲಲ್ಲಿ ಬಾಯಿ ರುಚಿಗೆ ಮಾತ್ರ ಹಾಕಿದ್ದು ತಿಂದು ಕೊಂಡು ಮನೆಗೆ ಬಂದು, ಹಸಿವು ನೀಗಲು ಒಂದು ಗೊನೆ ಬಾಳೇಹಣ್ಣು, ಇದ್ದ ಹಾಲು ಕುಡಿದು ಮಲಗಿದೆ.

ಮುಂದೆ ಮೂರು ತಿಂಗಳು ಜೀವನದ ಸ್ವತಂತ್ರ ಸಂಗ್ರಾಮದಲ್ಲಿ ಮುಳು ಗಿದ್ದ ನನಗೆ ಈ ಲಾಟರಿ ಪೂರ್ಣ ಮರೆತುಹೋಗಿತ್ತು. ನಾನು ವ್ಯಾಪಾರಿ. ಆ ಕಡೆ ಕೊರಿಯಾ ಯುದ್ಧ. ಈ ಕಡೆ ಹತೋಟಿಗಳ ಹಾಕುವಿಕೆ. ತೆಗೆಯುವಿಕೆ. ಅಮೇರಿಕಾದಲ್ಲಿ ಮಾಡಿದ್ದು ಎಂದು ಸ್ವದೇಶಿ ವಸ್ತುಗಳ ಬೆಲೆ ಏರಿಸುವುದು, ಅವುಗಳಿಗೆ ಹೆಸರು ಬದಲಾಯಿಸುವುದು. ಅಧಿಕಾರಿಗಳನ್ನು ಅನುಸರಿಸುವುದು, ಮುಖ್ಯ ಸಮಾಜಕ್ಕೆ ಟೋಪೀ ಹಾಕಿ ಒಂಟಿ ಜೀವನವನ್ನು ಸುಗಮವನ್ನಾಗಿ ಮಾಡುವುದು. ಈ ಗಲಾಟೆಯಲ್ಲಿ ಲಾಟರಿ ಟಿಕೇಟುಗಳನ್ನು ಮರೆತಿದ್ದುದು ಸಹಜವೇ! ಅಲ್ಲವೇ!

* * *

ಆ ದಿನ ಭರ್ಜರಿ ಹರಿಕಥೆ—ಅಹಿಂಸಾ ಮೂರ್ತಿಯಮೇಲೆ ಪ್ರಸಿದ್ಧ ಭಾಗವತರು– ಗ್ರಾಮಾಫೋನ್ ರಿಕಾರ್ಡ್‌ಗಳನ್ನೇ ಮೀರಿದ ಭಾಗವತರು— ಹರಿಕಥೆ ನಡೆಸಲು ಬಂದಿದ್ದರೆ—ಘನವಾದ ಪಿಟೀಲು ಮೃದುವಾದ ಮೃದಂಗ— ಇಂಥಹ ಹಿನ್ನೆಲೆ ನಮ್ಮೂರಿನಲ್ಲೇ ಸೇರಿದ್ದಿಲ್ಲ. ಊರಿಗೆ ಊರೇ ಬಂದಿತ್ತು. ಭಾಗವತರು ಭರ್ತಿಯಾಗಿ ಬಂದಿದ್ದರು. ಬಲು ಸೊಗಸಾಗಿ ಕಥೆಮಾಡಿದರು. ಪಿಟೀಲಿನವರು ರಾಟೆನೂತ ಹಾಗೇ ನುಡಿಸಿದ. ಮೃದಂಗದವನು 'ಅಹಿಂಸೆ' ಯೇ ನನ್ನ ಪರಮ ಧರ್ಮ ಎನ್ನುವಂತೆ ಬೆರಳಾಡಿಸುತ್ತಿದ್ದ.

ಹರಿಕಥೆ ಮುಗಿದು ಮಂಗಳಾರತಿ ತಟ್ಟೆ ಬರೋವೇಳೆಗೆ ಎಲ್ಲರೂ ಹೊರ ಬಿದ್ದಿದ್ದೆವು. ಅಲ್ಲೇ ಸಾಹುಕಾರ ಶೇಷಣ್ಣ ಹೇಳಿದ್ದು. 'ಚೀಚು! ನಿನ್ನ ಪುಣ್ಯಾನೋ ಪುಣ್ಯ. ನನ್ನ ಹತ್ತಿರ ಹನುಮಂತರಾಯ ವಾಚನಾಲಯದ ನಿಧಿ ಲಾಟರಿ ಟಿಕೆಟ್ ಕೊಂಡೆಯಲ್ಲಾ. ಅದಕ್ಕೆ ನೂರು ರೂಪಾಯಿ ಬಹುಮಾನ ಬಂದಿದೆ. ನಾಳೆ ನಾಡಿದ್ದರಲ್ಲಿ ನಿನಗೆ ಮನಿಆರ್ಡರ್ ಬರುತ್ತೆ ಅಂತ.

ಆ ವೇಳೆಗೆ ಅಬಲಾಸದನದ ಕಾರ್ಯದರ್ಶಿಗಳು ಸಿಕ್ಕಿದರು. 'ನಮಸ್ತೇ! ಅಂದರು. ನೀವು ಪುಣ್ಯಶಾಲಿಗಳು ಅಂದರು ನಿಮ್ಮ ಟಿಕೇಟಿಗೆ ಮೊದಲ ಬಹು ಮಾನ. ಅಬಲಾಸದನದವರು ನಿಮಗೆ ತಾವು ಖುದ್ದು ತಯಾರಿಸಿದ್ದನ್ನೆಲ್ಲಾ ಕಳಿಸಿಕೊಡುತ್ತಾರೆ ನಾಳೆ ಎಂದರು.

'ನಾಳೆ' ಬಂತು. ಒಬ್ಬ ಜವಾನ ಒಂದು ಬುಟ್ಟಿ, ತುಂಬಾ ಪೊಟ್ಟಣಗಳನ್ನ ಹೊತ್ತುತಂದು ನಮ್ಮನೆಗೆ ಕೊಟ್ಟ. ಅವನ ಜತೆಯಲ್ಲಿ ಕಾರ್ಯದರ್ಶಿಗಳೂ ಬಂದಿದ್ದರು. 'ಇದೇ ಮೊದಲ ಬಹುಮಾನ ಎಂದರು. ನಿಮ್ಮ ಟಿಕೇಟ್ ಕೊಡಿ ರಸೀತೀನೂ ಕೊಡಿ ಎಂದರು. ಎರಡೂ ಕೊಟ್ಟು ಅವರುಗಳು ಆಕಡೆ ಹೋದ ಮೇಲೆ ಈಕಡೆ ಬುಟ್ಟಿ ತೆಗೆದೆ. ಏನೇನಿತ್ತು ಗೊತ್ತೆ? ಒಂದು ಸೇರು ಹುರಿಟ್ಟು, ಘಮಘಮಿಸುವ ರಾಗೀ ಹುರೀಟ್ಟು, ಒಂದು ಸೇರಿನಷ್ಟು ಹುರಿಗಾಳು, ಇಪ್ಪತ್ತೈದು ಹುರುಳಿ ಹಪ್ಪಳ, ಇಪ್ಪತ್ತೈದು ಉದ್ದಿನ ಹಪ್ಪಳ, ಒಂದು ಬಾಟಲ್ ಉಪ್ಪಿನಕಾಯಿ, ಒಂದು ಪೊಟ್ಟಣ ಉಪ್ಪುಹಾಕಿದ ಗೋರೀಕಾಯಿ, ಒಂದು ಪೊಟ್ಟಣ ಸಂಡಿಗೆ.—

ಮುಖ್ಯನೋಡಿ ನನ್ನಂತಹ ಒಂಟಿ ಜೀವಿಗೆ ತಿಂಗಳಿಗೆ ಸಾಕಾಗುವಷ್ಟು ರುಚಿರುಚಿಯಾದ ಆಹಾರ ಪದಾರ್ಥಗಳು. ಈ ರೇಷನ್-ಕಾಲದಲ್ಲಿ—ಈ ಹೋಟಲ ಊಟದ ಕಾಲದಲ್ಲಿ ಒಂದು ತಿಂಗಳು ರಾಜ ಭೋಜನ ಮಾಡಬಹುದಲ್ಲಾ! ಹಿಂದಿನಕಾಲದ ಸವಿ ಕನಸೆಲ್ಲಾ ನನಸಾಗುತ್ತಲ್ಲಾ! ಅಂತ ಹಿಗ್ಗಿದೆ.

ಮಾರನೇ ದಿನ ಮನಿ ಆರ್ಡರೂ ಬಂತು. ತೊಂಬತ್ತೊಂಭತ್ತು ರೂಪಾಯಿಗೆ—ಮಿಕ್ಕ ಒಂದು ರೂಪಾಯಿ ಮನಿ ಆರ್ಡರ್ ತಂದವನಿಗೆ ಪ್ರೀತಿಭತ್ಯ—

—ಅಲ್ಲಾ! ಯಾಕೆ ಹೇಳುಕ್ಕೆ ಬಂದೆ ಅಂದರೆ ಒಳ್ಳೇಕೆಲಸಕ್ಕೆ ನೆರವಾದರೆ ಹಾದಿಯಲ್ಲಿ ಏನೇ ಕಷ್ಟಗಳು ಬರಲಿ, ನಿಷ್ಠೂರಗಳು ಆಗಲಿ ಕಡೆಯಲ್ಲಿ ಕೈ ಬಾಯಿ ಮೊಸರು ಅನ್ನೋದಕ್ಕೆ ಬೇರೆ ನಿದರ್ಶನ ಬೇಕೆ? ಮೊದಲು ಒಂದು ಇಪ್ಪತ್ತುಹೋದರೂ, ಹೊಟ್ಟೆ ಉರಿಸಿ ಹೋದರೂ, ಕೂಡ ಆ ಮೇಲೆ ತೊಂಭತ್ತೊಂಭತ್ತು ರೂಪಾಯಿ ನಗದು, ಅದಕ್ಕೂ ಹೆಚ್ಚಾಗಿ ಒಂದು ತಿಂಗಳು ಸುಖವಾಗಿ ಕುರುಕುಲು, ಅಬಲಾಸದನದವರ ಕೈಚಳಕ!

ಇಂತಹದಹುದೆಷ್ಟೋ! ಆಗಲೇಬೇಕಲ್ಲಾ !!

—ಶಿವು

—o—

ನಮ್ಮ ರಾಜಕಾರಣಿಗಳು ಮಾಡುವುದಕ್ಕಿಂತ ಮಾತನಾಡುವುದೇ ಹೆಚ್ಚು ಎಂಬ ಆಕ್ಷೇಪಣೆ.

—ಸಧ್ಯ ಮಾಡಿ ಕೆಡಿಸುವುದರ ಬದಲು ಮಾತಾಡಿ ಗೋಳು ಹುಯ್ಯುವುದು ವಾಸಿ ಅಲ್ಲವೇ?

* * *

ಗುಂಡಪ್ಪನ ಕಛೇರಿ

ಗುಂಡಪ್ಪನನ್ನು ಮಾತಾಡಿಸಿಕೊಂಡು ಬರೋಣವೆಂದು ಮೊನ್ನೆ........ ಟ್ಯಾಕ್ಸ್ ಕಛೇರಿಗೆ ಹೋಗಿದ್ದೆ. ಆಗ ಮೂರೂವರೆ ಗಂಟೆ. ಹೊರಬಾಗಿಲು ಎಡಗಡೆ ಮೂಲೆಯಲ್ಲೇ ಗುಂಡಪ್ಪನ ಸೀಟು. ಬಲಭಾಗದ ಮೂಲೆಯಲ್ಲಿರುವ ರೂಮಿನಲ್ಲಿ ಸಾಹೇಬರ ಸೀಟು. ಆಚೇಕಡೆಗೇ ಕಿಟಕಿಯಲ್ಲಿ ಸಾಹೇಬರ ಸೀಟು ಕಾಣುತ್ತೆ. ಸಾಹೇಬರು ಆಗ ಇರಲಿಲ್ಲ. ನಾನು ಹೊಸಲುಹತ್ತಿ ಅತಿತೆಗಿದ ಬಾಗಿಲನಲ್ಲಿ ಗುಂಡಪ್ಪನ ಸೀಟಿದ್ದ ಮೂಲೆಯಕಡೆ ಕತ್ತು ಚಾಚಿದೆ! ನನ್ನ ಮುಖ ನೋಡಿದ್ದೇ ತಡ, ಗುಂಡಪ್ಪ ಹ್ಹಿ! ಹ್ಹಿ! ಹ್ಹಿ! ಎಂದು ನಕ್ಕು ಸಪ್ಪೆಮೊರೆ ಹಾಕಿಕೊಂಡು ನಿಂತಿದ್ದ ಜೂನಿಯರ್ ಕ್ಲಾರ್ಕ್ ವಾಸುದೇವಯ್ಯನ ಬೆನ್ನಿಗೆ ಎರಡು ಬಿಸಿಯಾಗಿ ಬಾರಿಸಿ 'ಕಕ್ಕು ಒಂದು ರೂಪಾಯಿ' ಎಂದು ಹೂಂಕರಿಸಿದ! ಮೂರೂವರೆ ಗಂಟೆಯಲ್ಲಿ ಕಛೇರಿಯೊಳಗೆ ಇವನು ಹೀಗೆ ಕೂಗಿಕೊಳ್ಳುತ್ತಾನಲ್ಲ ಹುಚ್ಚನಂತೆ, ಎಂದು ನಾನು ಕಕ್ಕಾಬಿಕ್ಕಿಯಾಗಿ ಒಳಕ್ಕೆ ನುಗ್ಗಿ ಅವನನ್ನು ಹಿಡಿದುಕೊಂಡೆ. 'ಹೆದರುವುದಕ್ಕೆ ಕಾರಣವಿಲ್ಲ ಮಾವಯ್ಯ! ನನ್ನ ಜುಟ್ಟುಬಿಡು' ಎಂದ ಗುಂಡಪ್ಪ. ಕುರ್ಚಿಯಮೇಲೆ ನನ್ನನ್ನು ಕೂರಿಸಿ ನಿಧಾನವಾಗಿ ಹೇಳಿದ—

'ಇವತ್ತು ಸಾಹೇಬರು ಆಫೀಸಿಗೆ ಬರುವುದಿಲ್ಲ ಅಂತ ನಾನು! ಬಂದೇ ಬರುತ್ತಾರೆ ಅಂತ ವಾಸುದೇವಯ್ಯ. ಬರೋದಿಲ್ಲ ಅಂತ ನಾನು, ಬರುತ್ತಾರೆ ಅಂತ ಅವನು. ಸರಿ ಇಬ್ಬರೂ ಒಂದೊಂದು ರೂಪಾಯಿ ಬಾಜಿಕಟ್ಟಿದೆವು. ಮೂರೂವರೆ ಗಂಟೆಗಾದರೂ ಸಾಹೇಬರು ಆಫೀಸಿಗೆ ಬಂದೇ ಬಂದರೆ ನಾನು ವಾಸುದೇವಯ್ಯನಿಗೆ ಒಂದು ರೂಪಾಯಿ ಕೊಡಬೇಕು. ಸಾಹೇಬರು ಬಾರದಿದ್ದರೆ ವಾಸುದೇವಯ್ಯ ನನಗೆ ಒಂದು ರೂಪಾಯಿ ತೆತ್ತಬೇಕು.—ಹೀಗೆ ಬಾಜಿ ಕಟ್ಟಿದ್ದೆವು. ರೂಪಾಯಿ ಕಕ್ಕುವ ಘಳಿಗೆ ವಾಸುದೇವಯ್ಯನಿಗೆ ಸಮೀಪಿಸುತ್ತಿದೆ ಅಂತ ನಾನು ಗಡಿಯಾರಾನೂ, ಬಾಗಲನ್ನೂ ನೋಡುತ್ತಲೇ ಇದ್ದೆ. ನಿನ್ನ ನಡಿಗೆಯ ಸದ್ದು ಕೇಳಿ 'ಸಾಹೇಬರು ಬಂದರು' ಅಂತ ವಾಸುದೇವಯ್ಯ ಎದ್ದು ನಿಂತುಕೊಂಡ. ಅಷ್ಟುಹೊತ್ತಿಗೆ ಸರಿಯಾಗಿ ಬಾಗಿಲಲ್ಲಿ ನೀನು ತಲೆ ಹಾಕಿದೆ! ಆಮೇಲೆ ಏನಾಯಿತೆಂಬುದು ನಿನಗೇ ಗೊತ್ತು'— ಎಂದು. ನಗತೊಡಗಿದ. ನನಗೂ ನಗುಬಂತು!

ಈ ಬಾಜಿಯಾಟವನ್ನ ವಾಸುದೇವಯ್ಯ ಆಮೇಲೆ ನನಗೆ ವಿವರಿಸಿದ. ಅವರ ಕಛೇರಿಯಲ್ಲಿ ಎಲ್ಲಾ ಗುಮಾಸ್ತರೂ ಹೀಗೇ ಬಾಜಿಕಟ್ಟಿ ನಿತ್ಯವೂ ಆಡುತ್ತಾರಂತೆ !

ಇವತ್ತು ಸಾಹೇಬರು ಯಾರಿಗೆ ಗ್ರಹಚಾರ ಬಿಡಸುತ್ತಾರೆ? ಎಂದು ಗುಂಡಪ್ಪ ಎತ್ತುತ್ತಾನಂತೆ! ಟೈಪಿಸ್ಟ್ ರಂಗರಾಯನಿಗೆ ಅಂತ ಅಯ್ಯಂಗಾರಿ ಅಕೌಂಟೆಂಟ್ ನಾರಣಪ್ಪನಿಗೆ ಅಂತ ಶಿವರಾಮಯ್ಯ. ಯಾರೊಬ್ಬರು ಒಪ್ಪಿಕೊಳ್ಳುವುದಿಲ್ಲ. ಇಬ್ಬರೂ ಬಾಜಿ ಕಟ್ಟುತ್ತಾರೆ. ಉಳಿದ ಕ್ಲಾರ್ಕುಗಳು ಎರಡು ಪಕ್ಷಗಳಿಗೂ ಸೇರಿಕೊಂಡು ಬಾಜಿಯಾಟ ನಡೆಸುತ್ತಾರೆ. ಉಗಿಸಿಕೊಳ್ಳಲು ಸಿದ್ಧವಾಗಬೇಕಾದ ಸೂಚಿತ ವ್ಯಕ್ತಿಗಳೂ ತಮ್ಮ ತಮ್ಮ ವಿರೋಧ ಪಕ್ಷಗಳಿಗೆ ಸೇರಿಕೊಳ್ಳುತ್ತಾರೆ! ಈ ಬಾಜಿಗಳಲ್ಲೆಲ್ಲಾ ಗುಂಡಪ್ಪನ ಕೈವಾಡವೇ ಜಾಸ್ತಿ! ರಂಗರಾಯನಿಗೇ ಉಗಿಸಿ ಅಯ್ಯಂಗಾರಿ ಪಕ್ಷನ ಗೆಲ್ಲಿಸಬೇಕು ಅಂತ ಗುಂಡಪ್ಪನಿಗೆ ತೋಚಿದರೆ ಆವನು ಒಂದು ಉಪಾಯ ಹೂಡ್ತುತ್ತಾನೆ. ಇನ್ನು ೫, 10 ನಿಮಿಷಗಳಲ್ಲಿ ಸಾಹೇಬರು ಕಛೇರಿ ತಲುಪುತ್ತಾರೆ ಎಂಬುದನ್ನ ಗುಂಡಪ್ಪ ಹೇಗೋ ತಿಳಿದುಕೊಂಡು ಬಿಡುತ್ತಾನೆ. ಆಗ ರಂಗರಾಯನನ್ನು ಕರೆದು ಒಂದು ಲೋಟ ಕಾಫಿ ತರುವಂತೆ ಹೇಳುತ್ತಾನೆ. ಗುಂಡಪ್ಪನ ಮಾತನ್ನ ರಂಗರಾಯ ಮೀರಲಾರ. ಹೋಟಲಿಗೆ ಹೋಗಿ ಕಾಫಿ ತೆಗೆದುಕೊಂಡು ಕಛೇರಿಯ ಬಾಗಿಲಗೆ ಬರುವ ಹೊತ್ತಿಗೆ ಸಾಹೇಬರೂ ಅಲ್ಲಿಗೆ ಬರುತ್ತಾರೆ. ಕಾಫಿ ಗ್ಲಾಸನ್ನು ನೋಡಿ ಸಾಹೇಬರು ಕಿಡಿಕಿಡಿಯಾಗುತ್ತಾರೆ. "ಆ ಸ್ಟೇಟ್‌ಮೆಂಟ್ ಟೈಪ್ ಆಗಿದ್ದರೆ, ತಗೊಂಡು ಬಾ" ಎಂದು ಗರ್ಜಿಸುತ್ತಾರೆ. ಟೈಪ್ ಮಾಡುವುದನ್ನೇ ಮರೆತು ಬಿಟ್ಟಿದ್ದ ರಂಗರಾಯ "ಇನ್ನೂ ಟೈಪ್....ಮಾಡಿಲ್ಲ....ಸಾರ್!" ಅನ್ನುತ್ತಾನೆ. ಸಾಹೇಬರು ರಂಗರಾಯನಿಗೆ ಗ್ರಹಚಾರ ಬಿಡಿಸಿ, ಮುಖ ತೋರಿಸಬೇಡ, ವರಸಿಕೋ, ಆಚೆಗೆಹೋಗು, ಅನ್ನುತ್ತಾರೆ! ಸಂಜೆಗೆ ಅಯ್ಯಂಗಾರಿ ಪಕ್ಷದವರಿಗೆ ಶಿವರಾಮಯ್ಯನ ಪಕ್ಷದವರು ಕಾಫಿ ಕುಡಿಸಿ ಪಾರ್ಕಿನಲ್ಲಿ ಕಡಲೆಕಾಯಿ ಕೊಡಿಸಬೇಕು. ಉಗಿತತಿಂದ ರಂಗರಾಯನನ್ನು ಎಲ್ಲರೂ ಕಡಲೆಕಾಯಿ ತಿನ್ನುತ್ತಾ ಸಂತೈಸುತ್ತಾರಂತೆ ! —

"ಹೀಗೇ ಪ್ರತಿಯೊಬ್ಬರಿಗೂ ಒಂದೊಂದು ದಿವಸ ಉಗಿತ ಬೀಳುತ್ತಿರುತ್ತೆ. ಆಮೇಲೆ ಎಲ್ಲರೂ ಪಾರ್ಕಿನಲ್ಲಿ ಸೇರಿ ಕಡಲೆಕಾಯಿ ತಿನ್ನುತ್ತ ಉಗಿತ ತಿಂದವರನ್ನ ಸಂತೈಸುತ್ತೇವೆ. ಆದುದರಿಂದಲೇ ನಮ್ಮ ಆಫೀಸಿನಲ್ಲಿ ಸಾಹೇಬರು ಎಷ್ಟು ಬೈದರೂ ಯಾರೂ ವರ್ಗಮಾಡಿಸಿಕೊಳ್ಳುವುದಕ್ಕೇ ಆಶೆ ಪಡುವುದಿಲ್ಲ! ಚನ್ನಾಗಿ ಉಗಿಯುತ್ತಾರೆ. ಈ ಸಾಹೇಬರೇ ಉಗಿಯಲಿ ಎಂದು ರಂಗರಾಯ ಹೇಳುತ್ತಾನೆ. ಬೈಗಳ ತಿಂದೂ ತಿಂದೂ ಮೊಂಡು ಬಿದ್ದು ಬಿಟ್ಟಿದಾನೆ" ಎಂದು ವಾಸುದೇವಯ್ಯ ಹೇಳಿದ.